ಜೆಪಿ ಕೈಪಿಡಿ

ಡಿ. ಎಸ್. ನಾಗಭೂಷಣ



ಜೆಪಿ ಕೈಪಿಡಿ

ಡಿ.ಎಸ್.ನಾಗಭೂಷಣ

ಪ್ರಕಾಶಕರು

ಗೀತಾಂಜಲಿ ಪುಸ್ತಕ ಪ್ರಕಾಶನ

ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರ ನಗರ

ಶಿವಮೊಗ್ಗ - ೫೭೭ ೨೦೧

JP Kaipidi

A Hand Book introducing Jayaprakash Narayana, the Sarvodaya leader, written by **D.S.Nagabhushana.** HIG-5, 'Nudi', KHB Colony, Kallahally Extn., Vinobanagar, Shivamogga - 577 204, Tel : 08182-248574, Mobile: 94492 42284

ಮುದ್ರಣ: ೧೦೧೨, ಪುಟಗಳು: ೫೪
ಬೆಲೆ: ರೂ. ೨೫

ಪ್ರಕಾಶಕರು

ಗೀತಾಂಜಲಿ ಪುಸ್ತಕ ಪ್ರಕಾಶನ

ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರ ನಗರ
ಶಿವಮೊಗ್ಗ - ೫೭೭ ೨೦೧, ದೂರವಾಣಿ: ೯೪೪೯೮೮೬೩೯೦

ಲೇಖಕನ ಮಾತು

ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ೨೦೧೧ರ ಅಕ್ಟೋಬರ್‌ನಲ್ಲಿ ತನ್ನ ಉದ್ಘಾಟನೆಯ ಸಂದರ್ಭದಲ್ಲಿ ಪ್ರಕಟಿಸಿದ್ದ ಲೋಹಿಯಾ ಕೈಪಿಡಿ, ಜೆಪಿ ಕೈಪಿಡಿ ಮತ್ತು ಲೋಹಿಯಾ ವಾಣಿ ಎಂಬ ಈ ತ್ರಿವಳಿ ಕಿರುಪುಸ್ತಕಗಳು ಈಗ ಹೊಸ ಆಕಾರ ಮತ್ತು ರೂಪಗಳಲ್ಲಿ ಪರಿಷ್ಕೃತಗೊಂಡು ಪ್ರಕಟವಾಗುತ್ತಿವೆ.

ಮೊದಲೆರಡು ಪುಸ್ತಕಗಳು ಭಾರತೀಯ ಸಮಾಜವಾದಿ ಚಳುವಳಿಯ ಎರಡು ಕಣ್ಣುಗಳಂತಿರುವ ಡಾ॥ ರಾಮಮನೋಹರ ಲೋಹಿಯಾ ಹಾಗೂ ಜಯಪ್ರಕಾಶ್ ನಾರಾಯಣರ ಬದುಕು ಮತ್ತು ವಿಚಾರಗಳನ್ನು ಸಂಕ್ಷಿಪ್ತವಾಗಿ ಮತ್ತು ಸಾರವತ್ತಾಗಿ ಪರಿಚಯ ಮಾಡಿಕೊಡುವ ಪ್ರಯತ್ನಗಳು. ಬದುಕು ಎಲ್ಲ ಕ್ಷೇತ್ರಗಳಲ್ಲಿ ವಾಣಿಜ್ಯಮಯವಾಗಿ, ಎಲ್ಲವನ್ನೂ ಹಣಕಾಸು ಪರಿಭಾಷೆಯಲ್ಲೇ ಸರಕಾಗಿ ಗ್ರಹಿಸಿ ಬೆಲೆ ಕಟ್ಟುತ್ತಿರುವ ಈ ದಿನಗಳಲ್ಲಿ, ಮನುಷ್ಯ ಸಂವೇದನೆಯೆಂಬುದೇ ನಿಜವಾಗಿ ಮಾಯವಾಗುತ್ತಿದೆಯೇನೋ ಎನಿಸತೊಡಗಿದೆ. ಇದರ ಫಲವಾಗಿ ಕ್ರೋಧ, ಮತ್ಸರ, ಹಿಂಸೆಗಳಿಂದ ತುಂಬಿದ ಸ್ಪರ್ಧೆ ಮತ್ತು ನವ ಶ್ರೀಮಂತಿಕೆಯ ಸಾಮಾಜಿಕ ಅಶ್ಲೀಲತೆಗಳು ಗಾಬರಿಗೊಳಿಸುವಷ್ಟರ ಮಟ್ಟಿಗೆ ಬೆಳೆಯುತ್ತಿವೆ. ನಾವು ಕಳೆದ ಅರವತ್ತು ವರ್ಷಗಳಲ್ಲಿ ಏನು ಕಟ್ಟ ಹೊರಟು ಎಲ್ಲಿಗೆ ತಲುಪಿದ್ದೇವೆ ಎಂಬ ಪ್ರಶ್ನೆ ನಮ್ಮನ್ನು ಸದಾ ಕಾಡತೊಡಗಿದೆ. ಇಂತಹ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಬದುಕನ್ನೇ ಮುಡಿಪಾಗಿರಿಸಿ, ನಾಡನ್ನು ಕಟ್ಟ ಹೊರಟ-ತಮ್ಮ

ವಿಶಿಷ್ಟ ವಿಚಾರ ಮತ್ತು ತ್ಯಾಗ ಹಾಗೂ ಸಾಹಸಗಳ ಮೂಲಕ ತಮ್ಮ ಕಾಲದ ಯುವಜನರ ಕಣ್ಮಣಿಗಳಾಗಿದ್ದ–ಇಬ್ಬರು ಧೀಮಂತ ನಾಯಕರನ್ನು ಇಂದಿನ ಯುವಜನರಿಗೆ ಪರಿಚಯ ಮಾಡಿಕೊಡುವುದು ಉಚಿತವೆಂದು ನಾನು ಭಾವಿಸಿದ್ದೇನೆ.

ಇನ್ನು ಮೂರನೆಯ ಪುಸ್ತಕ ಲೋಹಿಯಾವಾಣಿ ಲೋಹಿಯಾ ಅವರ ಸಾಹಿತ್ಯ ಮತ್ತು ಭಾಷಣಗಳಿಂದ ಆಯ್ದ ಉಲ್ಲೇಖಗಳ ಕಿರು ಸಂಗ್ರಹ. ಲೋಹಿಯಾ ಅಪೂರ್ವ ಮುನ್ನೋಟದ ಚಿಂತಕರೂ ಮತ್ತು ರಾಜಕಾರಣಿಯೂ ಆಗಿದ್ದುದರಿಂದ ಈ ಉಲ್ಲೇಖಗಳು ಹಳೆಯವೆನ್ನಿಸದೆ, ರಾಜಕೀಯ ಮತ್ತು ಸಾಮಾಜಿಕ ಪುನಾರಚನೆಯ ಕೆಲಸದಲ್ಲಿ ತೊಡಗಿರುವವರಿಗೆ ಇಂದೂ ಎಚ್ಚರಿಕೆಯ ಘಂಟೆಗಳಂತೆ, ಬೆಳಕಿನ ದಾರಿಗಳಂತೆ, ಹೊಸ ಅರಿವು ಮತ್ತು ಸ್ಫೂರ್ತಿ ತುಂಬಿ ಮುನ್ನಡೆಸಬಲ್ಲವಾಗಿವೆ. ಇದು ಈ ಹಿಂದೆ ಪ್ರಕಟವಾಗಿದ್ದ ಲೋಹಿಯಾ ಕೆಂಪು ಪುಸ್ತಕದ ಸಂಕ್ಷಿಪ್ತ ರೂಪವಲ್ಲ. ಲೋಹಿಯಾ ಸಾಹಿತ್ಯ ಎನ್ನಿಸುವ ಸರಿ ಸುಮಾರು ಎಲ್ಲ ಸಾಹಿತ್ಯವನ್ನೂ ಮತ್ತೊಮ್ಮೆ ತಡಕಿ, ಇಂದಿನ ಸಂದರ್ಭಕ್ಕೂ ಪ್ರಸ್ತುತವಾಗಬಲ್ಲ ಉಲ್ಲೇಖಗಳನ್ನು ಹೊಸದಾಗಿಸಂಪಾದಿಸಿ, ಅನುವಾದಿಸಿ, ಹೊಸ ವಿನ್ಯಾಸದಲ್ಲಿ ಜೋಡಿಸಿರುವ ಪುಸ್ತಕವಿದು. ಆದರೆ ಇದು ಲೋಹಿಯಾರ ತಾತ್ವಿಕತೆಯನ್ನು ಅರಿಯಲು Short cut ಅಲ್ಲ. ಈ ಕಿರು ಪುಸ್ತಕ ಲೋಹಿಯಾರ ಸಮಗ್ರ ವಿಚಾರಧಾರೆಯನ್ನು ಪರಿಚಯಮಾಡಿಕೊಳ್ಳಲು ಪ್ರೇರೇಪಿಸುವ ಪ್ರಯತ್ನವಷ್ಟೆ. ಇಲ್ಲಿನ ಕೆಲವು ಉಲ್ಲೇಖಗಳನ್ನು ಅರ್ಥ ಮಾಡಿಕೊಳ್ಳಲು ಸ್ವಲ್ಪ ರಾಜಕೀಯ ತತ್ವಶಾಸ್ತ್ರದ ಪರಿಚಯದ ಅಗತ್ಯವಿದೆ. ಆದರೆ ಅಂತಹವನ್ನು ಸುಮ್ಮನೆ

ಓದಿಕೊಂಡು ಮುಂದುವರೆದರೆ, ಪುಸ್ತಕ ಮುಗಿಸುವ ಹೊತ್ತಿಗೆ ಅವು ಸ್ವಲ್ಪವಾದರೂ ಅರ್ಥವಾಗುವ ಸಂಭವವುಂಟು.

ಈ ಮೂರೂ ಪುಸ್ತಕಗಳ ಓದಿನಿಂದ ಯುವಜನರಲ್ಲಿ ಸಮಾಜವಾದವನ್ನು ಕುರಿತು ಉದ್ದೇಶಪೂರ್ವಕವಾಗಿ ಹುಟ್ಟಿಸಲಾಗಿರುವ ಅನುಮಾನ-ಗೊಂದಲಗಳು ಸ್ವಲ್ಪಮಟ್ಟಿಗಾದರೂ ಪರಿಹಾರವಾಗಿ ಈ ಪರಿಕಲ್ಪನೆ ಮತ್ತು ಸಿದ್ಧಾಂತದ ಬಗ್ಗೆ ಹೊಸ ಕುತೂಹಲ ಉಂಟಾಗಬಹುದೆಂದು ನಾನು ಆಶಿಸಿದ್ದೇನೆ.

ಈ ಪುಸ್ತಕ ತ್ರಿವಳಿ ಪ್ರಕಟವಾದ ಒಂದು ವರ್ಷದಲ್ಲೇ ಖಾಲಿಯಾದರೂ, ಅವುಗಳಿಗೆ ಪುನರ್‌ಮುದ್ರಣದ ಸೌಭಾಗ್ಯ ಒದಗಿಬಂದಿರಲಿಲ್ಲ. ಗೀತಾಂಜಲಿ ಪುಸ್ತಕ ಪ್ರಕಾಶನದ ಗೆಳೆಯ ಜಿ.ಬಿ.ಟಿ. ಮೋಹನ್ ಅವುಗಳಿಗೆ ಈ ಭಾಗ್ಯ ಒದಗಿಸಿ ಕೊಟ್ಟಿದ್ದಾರೆ. ಅದೂ ಆಕರ್ಷಕ ಆಕಾರ ಮತ್ತು ರೂಪುಗಳಲ್ಲಿ. ಅವರಿಗೆ ಮತ್ತು ಈ ಪುಸ್ತಕಗಳ ಮೊದಲ ಮುದ್ರಣದ ಪ್ರಕಾಶಕರಾದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಟ್ರಸ್ಟಿಗಳೆಲ್ಲರಿಗೂ ಇಲ್ಲಿ ಕೃತಜ್ಞತೆಗಳನ್ನು ಹೇಳಬೇಕು.

೧೫.೩.೨೦೧೨
ಶಿವಮೊಗ್ಗ

ಡಿ.ಎಸ್.ನಾಗಭೂಷಣ

ಜೆಪಿ ಕೈಪಿಡಿ

ಭಾರತೀಯ ಸಮಾಜವಾದಿ ಚಳುವಳಿಯ ಪಿತಾಮಹರೆಂದು ಯಾರನ್ನಾದರೂ ಕರೆಯುವುದಿದ್ದರೆ, ಆ ಅಭಿದಾನಕ್ಕೆ ಪಾತ್ರರಾಗಬಲ್ಲ ಏಕೈಕ ನಾಯಕರೆಂದರೆ ಜಯಪ್ರಕಾಶ್ ನಾರಾಯಣರು. ಇವರಿಗಿಂತ ಹಿರಿಯರಾದ ಮತ್ತು ಇವರಿಗಿಂತ ಮುನ್ನ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಆಚಾರ್ಯ ನರೇಂದ್ರದೇವ, ಡಾ.ಸಂಪೂರ್ಣಾನಂದ ಮುಂತಾದವರು ಸಮಾಜವಾದದ ಬಗ್ಗೆ ಮಾತನಾಡುತ್ತಿದ್ದರಾದರೂ, ಆ ವಿಚಾರಕ್ಕೊಂದು ಸಂಘಟನೆಯ ಸ್ವರೂಪ ನೀಡಲು ಏಕಾಕಿಯಾಗಿ ಪ್ರಯತ್ನಿಸಿದವರೆಂದರೆ ಜಯಪ್ರಕಾಶರೇ. ಆನಂತರ ಜೆಪಿ ನಡೆಸಿದ ರಾಜಕೀಯ ಪಯಣ ಆಧುನಿಕ ಭಾರತದ ಇತಿಹಾಸದಲ್ಲೇ ಅತಿ ದೀರ್ಘವಾದದ್ದೂ, ವೈವಿಧ್ಯಮಯವಾದದ್ದೂ ಹೌದು. ದೇಶಕ್ಕೆ, ಅದರ ಜನತೆಗೆ ಬದ್ಧನಾದ ಹುಟ್ಟು ಹೋರಾಟಗಾರನೊಬ್ಬನ ನಂಬಿಕೆಗಳು ಒಂದು ತುದಿಯಿಂದ ಇನ್ನೊಂದು ತುದಿಗೆ ಬದಲಾಗುತ್ತಾ ಹೋದ; ಆದರೆ ಹಾಗೆ ಬದಲಾದ ನಂಬಿಕೆಗಳನ್ನು ತನ್ನ ಜನರಿಗೆ ವಿವರಿಸುತ್ತಾ-ತನ್ನ ಸರಳ ಮತ್ತು ಪ್ರಾಮಾಣಿಕ ಬದುಕಿನಿಂದಾಗಿ ಅವರ ವಿಶ್ವಾಸಾರ್ಹತೆ ಕಳೆದುಕೊಳ್ಳದೆ-

ಅವರನ್ನು ತನ್ನೊಂದಿಗೆ ಕರೆದೊಯ್ದ ಆಶ್ಚರ್ಯಕರ ಹಾಗೂ ಕೂತೂಹಲಕಾರಿ ಕಥೆ ಅವರ ಬದುಕು.

ಇದೀಗ ಆಚರಿಸಲಾಗುತ್ತಿರುವ ಭಾರತೀಯ ಸಮಾಜವಾದಿ ಚಳುವಳಿಯ ಅಮೃತ ಮಹೋತ್ಸವಕ್ಕೆ ಕಾರಣವಾಗಿರುವ ಸಮಾಜವಾದವನ್ನು ಆಧರಿಸಿದ ಪಕ್ಷವೊಂದನ್ನು ಜಯಪ್ರಕಾಶರು ಸ್ಥಾಪಿಸಿದರು. ಆ ಪಕ್ಷದೊಂದಿಗೇ ತಾವೂ ಮಾಗುತ್ತಾ, ಬದಲಾಗುತ್ತಾ; ಓರ್ವ ರಾಜಕೀಯ ಮುತ್ಸದ್ದಿಯಾಗಿ ಬೆಳೆದರು. ಒಂದು ಹಂತದಲ್ಲಿ ರಾಜಕಾರಣದಿಂದ ಬೇಸತ್ತು ಸರ್ವೋದಯ ಚಳುವಳಿಯ ಮೂಲಕ ಲೋಕಸೇವೆಗೆ ತಮ್ಮ ಬದುಕನ್ನು ಅವರು ಅರ್ಪಿಸಿಕೊಂಡರು. ಆದರೆ ಕಳೆದ ಶತಮಾನದ ಎಪ್ಪತ್ತರ ದಶಕದಲ್ಲಿ ರಾಷ್ಟ್ರ ರಾಜಕಾರಣ ಎಲ್ಲ ನೆಲೆಗಳಲ್ಲಿ ಭ್ರಷ್ಟಗೊಂಡು ಅನೈತಿಕವಾಗತೊಡಗಿದಾಗ ಮತ್ತೆ ರಾಜಕಿಯ ರಂಗ ಪ್ರವೇಶಿಸಿದರು. ಪಕ್ಷ ರಾಜಕಾರಣ ಮಾಡಿ ಅಧಿಕಾರ ಪಡೆಯಲಲ್ಲ. ಬದಲಿಗೆ ತಾವೂ ಸೇರಿದಂತೆ ಅನೇಕರು, ಈ ತಲೆಮಾರಿನ ಜನ ಊಹಿಸಲೂ ಅಸಾಧ್ಯವಾದಂತಹ ಹೋರಾಟ ಮತ್ತು ತ್ಯಾಗಗಳನ್ನು ಮಾಡಿ ಗಳಿಸಿಕೊಂಡಿದ್ದ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾನತೆಯ ಮೌಲ್ಯಗಳನ್ನು ಕಾಪಾಡುವ 'ಎರಡನೇ ಸ್ವಾತಂತ್ರ್ಯ ಹೋರಾಟ'ವನ್ನು ಆರಂಭಿಸಲು.

ಎರಡನೇ ಸ್ವಾತಂತ್ರ್ಯ ಹೋರಾಟ

ಜಯಪ್ರಕಾಶ್ ನಾರಾಯಣರು ಎಪ್ಪತ್ತರ ದಶಕದಲ್ಲಿ ಆರಂಭಿಸಿದ 'ಸಂಪೂರ್ಣ ಕ್ರಾಂತಿ' ಆಂದೋಲನವನ್ನು ಮತ್ತು ಅದರ ಮುಂದುವರೆದ ಭಾಗವಾದ ತುರ್ತು ಪರಿಸ್ಥಿತಿ ವಿರೋಧಿ ಕಾರ್ಯಾಚರಣೆಯನ್ನು ಎರಡನೇ ಸ್ವಾತಂತ್ರ್ಯ ಹೋರಾಟವೆಂದು ಕರೆಯಲಾಗುವುದು. ಏಕೆಂದರೆ, ಆ ಹೊತ್ತಿಗೆ ಸ್ವಾತಂತ್ರ್ಯ ಹೋರಾಟದ ಪಕ್ಷವೆನಿಸಿದ್ದ ಕಾಂಗ್ರೆಸ್ ಇಬ್ಭಾಗವಾಗಿತ್ತು. ಶ್ರೀಮತಿ

ಇಂದಿರಾ ಗಾಂಧಿ ನೇತೃತ್ವದ ಹುಸಿ ಎಡಪಂಥೀಯ ಗುಂಪು ತನ್ನ ಹುಸಿ ರಾಜಕಾರಣದಿಂದಾಗಿಯೇ ದೇಶವನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ರಾಜಕೀಯವಾಗಿ ಮತ್ತು ನೈತಿಕವಾಗಿ ದಿವಾಳಿ ಎಬ್ಬಿಸುವ ಹಂತ ತಲುಪಿತ್ತು. ಇದರಿಂದ ಪಾರಾಗಲು ಏನೂ ತೋಚದ ಶ್ರೀಮತಿ ಇಂದಿರಾ ಗಾಂಧಿ ಅಧಿಕಾರವನ್ನು ತಮ್ಮ ಬಳಿಯೇ ಹೆಚ್ಚೆಚ್ಚು ಕೇಂದ್ರೀಕರಿಸಿಕೊಳ್ಳುತ್ತಾ, ಸರ್ವಾಧಿಕಾರಿ ಪ್ರವೃತ್ತಿಯನ್ನು ತೋರತೊಡಗಿದ್ದರು. ಜೆಪಿ ಇದರ ಅಪಾಯವನ್ನು ಮುನ್ನೋಡಿ ಈ ಪ್ರವೃತ್ತಿಗಳ ವಿರುದ್ಧ ಗಾಂಧಿ ಮಾರ್ಗ ಬಳಸಿ ದೊಡ್ಡ ಆಂದೋಲನ ಕಟ್ಟಿ ರಾಷ್ಟ್ರವನ್ನು ಸರ್ವಾಧಿಕಾರದಿಂದ ಪಾರು ಮಾಡಿದರು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಇಂತಹ ಆಂದೋಲನವನ್ನು ಕಟ್ಟಬಲ್ಲವರು ಜೆಪಿ ಒಬ್ಬರೇ ಆಗಿದ್ದರು. ಸಮಾಜವಾದಿ ಆಂದೋಲನಕ್ಕೆ ಒಂದು ಸ್ಪಂದನಶೀಲ ತಾತ್ವಿಕತೆ ಒದಗಿಸಿ ಹೊಸ ತೇಜಸ್ಸು ನೀಡಿದ್ದ ಡಾ.ರಾಮಮನೋಹರ ಲೋಹಿಯಾ, ಜೆಪಿಯವರೊಂದಿಗೆ ಭಿನ್ನಾಭಿಪ್ರಾಯ ತಾಳಿ ಅವರಿಂದ ದೂರ ಸರಿದ ಬಹುಕಾಲದ ನಂತರವೂ ಸಮಾಜವಾದಕ್ಕೆ ಒಂದು ರಾಷ್ಟ್ರ ವ್ಯಾಪಿ ಆಂದೋಲನದ ಸ್ವರೂಪ ನೀಡಬಲ್ಲವರು ಯಾರಾದರೂ ಇದ್ದರೆ, ಅವರು ಜೆಪಿ ಒಬ್ಬರೇ ಎಂದು ಹೇಳುತ್ತಿದ್ದರು. ಲೋಹಿಯಾರಂತೆ ಜೆಪಿ ರಾಜಕೀಯವಾಗಿ ಅನುದಾರವಾದಿಯಾಗಿರಲಿಲ್ಲ. ಆದಷ್ಟೂ ಹೊಂದಿಕೊಂಡು ಹೋಗುವ, ಆದಷ್ಟೂ ಕ್ಷಮಿಸುವ ಗುಣ ಅವರಲ್ಲಿತ್ತು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಗಾಂಧಿ ಮಾರ್ಗವನ್ನು ಕಟುವಾಗಿ ಟೀಕಿಸುತ್ತಾ ಬಂದವರು ಜೆಪಿಯೇ ಆಗಿದ್ದರೂ, ಗಾಂಧಿ ತಾತ್ವಿಕತೆಯನ್ನು ಸೃಜನಶೀಲವಾಗಿ ವಿಸ್ತರಿಸಿದ ಲೋಹಿಯಾಗಿಂತಲೂ ಅವರು ವರ್ತನೆಯಲ್ಲಿ ಹೆಚ್ಚು ಗಾಂಧಿವಾದಿಯಾಗಿದ್ದರು! ಹಾಗಾಗಿಯೇ

ಅವರು ನೆಹರೂ ನಂತರದ ಪ್ರಧಾನ ಮಂತ್ರಿ ಎಂದು ಮತ್ತು ಆನಂತರ ಒಮ್ಮೆ ರಾಷ್ಟ್ರಪತಿ ಸ್ಥಾನದ ಒಮ್ಮತದ ಅಭ್ಯರ್ಥಿ ಎಂದೂ ಹೆಸರಿಸಲಾಗುವಷ್ಟು ವಿಶಿಷ್ಟ ಮಹತ್ವದ ನಾಯಕರೆನಿಸಿ ಕೊಂಡಿದ್ದರು. ಆದರೆ ಸಕ್ರಿಯ ಪಕ್ಷ ರಾಜಕಾರಣದ ಏಳುಬೀಳು ಗಳಲ್ಲಿ ಹೆಚ್ಚು ದಿನ ಇರಲಾಗದೆ ಸರ್ವೋದಯ ಚಳುವಳಿ ಸೇರಿದರು. ಕ್ರಮೇಣ ಅದನ್ನು, ಅದರ ನಾಯಕ ವಿನೋಬಾ ಭಾವೆಯವರು ಹಾಕಿದ್ದ ಚೌಕಟ್ಟಿನಾಚೆಗೆ ಒಯ್ದು 'ಲೋಕ ನಾಯಕ' ಎನಿಸಿಕೊಂಡರು.

ಅಂದಮಾತ್ರಕ್ಕೆ ಜೆಪಿಯವರ ರಾಜಕೀಯ ಜೀವನ ಹೊಂದಾಣಿಕೆಯಿಂದ ಕೂಡಿದ್ದು, ಅಷ್ಟೇನೂ ಸ್ಫೂರ್ತಿದಾಯಕ ಅಥವಾ ವರ್ಣರಂಜಿತವಾಗಿರಲಿಲ್ಲ ಎಂದರೆ ತಪ್ಪಾಗುತ್ತದೆ. ಏಕೆಂದರೆ, ರಾಷ್ಟ್ರೀಯ ಹೋರಾಟದ ನಿರ್ಣಾಯಕ ಘಟ್ಟವೆನಿಸಿದ ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿ ವೇಳೆಗೆ ರಾಷ್ಟ್ರದ ಯುವಜನತೆಯ ಏಕೈಕ ನಾಯಕರಾಗಿದ್ದವರೆಂದರೆ ಜಯಪ್ರಕಾಶರೇ. ಅವರು ಮಾರ್ಕ್ಸ್‌ವಾದದಿಂದ ದಟ್ಟವಾಗಿ ಪ್ರಭಾವಿತರಾಗಿದ್ದರೂ, ಗಾಂಧಿ ಪ್ರಭಾವದಿಂದ ವೈಯುಕ್ತಿಕ ನೆಲೆಯಲ್ಲಿ ತಪ್ಪಿಸಿಕೊಳ್ಳಲಾಗದ ಕಾರಣದಿಂದಾಗಿ ಕಮ್ಯುನಿಸ್ಟ್ ಪಕ್ಷ ಸೇರಲಿಲ್ಲ. ಬದಲಿಗೆ ಕಮ್ಯೂನಿಸ್ಟ್ ಪಕ್ಷಕ್ಕೆ ಸಮಾನಾಂತರವಾಗಿ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷವನ್ನು ಸ್ಥಾಪಿಸುವಲ್ಲಿ ಅವರು ತೋರಿದ ವಿಶಿಷ್ಟ ಸಾಹಸ ಮತ್ತು ಸಂಘಟನಾ ದಕ್ಷತೆ ಹಾಗೂ ಗಾಂಧೀಜಿ ಯೊಂದಿಗೆ ಜಗಳಾಡುತ್ತಲೇ ಅವರು ಸ್ವಾತಂತ್ರ್ಯ ಹೋರಾಟಕ್ಕೆ ನೀಡಿದ ಕ್ರಾಂತಿಕಾರಿ ತಿರುವುಗಳು ಅವರನ್ನೊಬ್ಬ ದಂತಕಥೆ ಯನ್ನಾಗಿಸಿದ್ದವು. ಹಾಗೆ ನೋಡಿದರೆ ಜಯಪ್ರಕಾಶ ನಾರಾಯಣರ ಬದುಕೆಂದರೆ, ದೊಡ್ಡ ತಾತ್ವಿಕನೊಬ್ಬನ ವೈಚಾರಿಕ ಕಥೆಯಾಗಿರದೆ, ಬಹು ದೊಡ್ಡ ರಾಜಕೀಯ ಹೋರಾಟಗಾರ 'ನೊಬ್ಬನ ಸಾಹಸದ ಕಥೆಯೇ ಆಗಿದೆ.

ಜೆಪಿ–ಲೋಹಿಯಾ ಜೋಡಿ

ಮುಖ್ಯವಾಗಿ 'ಭಾರತ ಬಿಟ್ಟು ತೊಲಗಿ' ಚಳುವಳಿ ದೇಶಕ್ಕೆ ಪರಿಚಯಿಸಿದ ಇಬ್ಬರು ಹೊಸ ನಾಯಕರೆಂದರೆ, ಜೆಪಿ ಮತ್ತು ಲೋಹಿಯಾ. ಇವರಿಬ್ಬರೂ ಭಾವನಾತ್ಮಕವಾಗಿ ಒಟ್ಟಿಗೇ ಇದ್ದಿದ್ದಲ್ಲಿ ಸಮಾಜವಾದಿ ಆಂದೋಲನ, ಜೆಪಿಯವರ 'ಸಂಪೂರ್ಣ ಕ್ರಾಂತಿ'ಯ ಎರಡನೇ ಅವತಾರದಲ್ಲಿ ಪುನರುಜ್ಜೀವನ ಪಡೆಯುವವರೆಗೆ ಕಾಯಬೇಕಿರಲಿಲ್ಲ ಎಂದು ಹೇಳಲಾಗುತ್ತದೆ. ನಿಜ, ಜೆಪಿಯವರ ಉದಾರ ವ್ಯಕ್ತಿತ್ವ ಹಾಗೂ ಲೋಹಿಯಾರ ಪ್ರಖರ ಬುದ್ಧಿಮತ್ತೆ ಎರಡೂ ಸಮಾಜವಾದಿ ಆಂದೋಲನದಲ್ಲಿ ಸಮರಸದಲ್ಲಿ ಮೇಳವಿಸಿದ್ದರೆ, ಇದು ಸಾಧ್ಯವಾಗುತ್ತಿತ್ತೋ ಏನೋ! ಆದರೆ ಜೆಪಿಯವರ ಉದಾರ ವ್ಯಕ್ತಿತ್ವ ಲೋಹಿಯಾಗೆ ಸ್ವಲ್ಪ ಭೋಳೆ ಎನಿಸಿ ಅದು ಸಮಾಜವಾದಿ ತಾತ್ವಿಕತೆಯ ದೃಷ್ಟಿ ಕೇಂದ್ರವನ್ನೇ ವಿಚಲಿತಗೊಳಿಸುತ್ತದೆ ಎಂದು ಭಾವಿಸಿದರು. ಹಾಗೇ ಜೆಪಿಗೆ, ಸಂಘಟನೆಯ ಶಿಸ್ತನ್ನು ಲೆಕ್ಕಿಸದ ಲೋಹಿಯಾರ ತಾತ್ವಿಕ ತೀವ್ರತೆ ಅಪಾಯಕಾರಿ ಎನ್ನಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಹಾಗಾಗಿ ಮೊದಲ ಸಾರ್ವತ್ರಿಕ ಚುನಾವಣೆಯ ನಂತರದಲ್ಲೇ ಇಬ್ಬರ ನಡುವಣ ಸ್ನೇಹದಲ್ಲಿ ಬಿರುಕು ಉಂಟಾಗಿ ಎರಡನೇ ಸಾರ್ವತ್ರಿಕ ಚುನಾವಣೆಯ ಹೊತ್ತಿಗೆ ಇಬ್ಬರೂ ಪರಸ್ಪರ ದೂರಾಗಿದ್ದರು.

ಆದರೆ ಲೋಹಿಯಾ ನಿಧನರಾಗುವ ಮುನ್ನ ಆಸ್ಪತ್ರೆ ಸೇರಿದ್ದಾಗ ಅವರ ನಿರಂತರ ಆರೈಕೆಯಲ್ಲಿದ್ದವರು ಜೆಪಿಯವರೇ. ಹಾಗೇ ಅವರ ಪಾರ್ಥಿವ ಶರೀರದ ಅಂತ್ಯ ಸಂಸ್ಕಾರದ ಸಂದರ್ಭದಲ್ಲಿ, 'ರಾಮಮನೋಹರ ನನಗಿಂತ ಚಿಕ್ಕವನು... ನ್ಯಾಯವಾಗಿ ಈಗ ಅವನ ಜಾಗದಲ್ಲಿ ನಾನಿರಬೇಕಿತ್ತು...' ಎಂದು ಗದ್ಗದಿತರಾದವರು ಜೆಪಿಯೇ. ಜೆಪಿಯವರ ಮನೆಯ ಮಲಗುವ ಕೋಣೆಯ ಗೋಡೆಯ ಮೇಲೆ ಅವರು ನಿಧನರಾಗುವವರೆಗೂ ಲೋಹಿಯಾ

ಚಿತ್ರ ತೂಗುತ್ತಿತ್ತು ಎಂಬುದು ಈ ಇಬ್ಬರ ಸ್ನೇಹದಲ್ಲಿನ ಆಂತರಿಕ ತಳಮಳವನ್ನೂ, ಸಮಾಜವಾದಿ ಚಳುವಳಿಯ ವಿಘಟನೆಗೆ ಕಾರಣವಾದ ಆಂತರಿಕ ಅಸಮತೋಲನನ ಸ್ವರೂಪವನ್ನೂ ಸೂಚಿಸುವಂತಿದೆ ಎಂದು ಹೇಳಬಹುದು.

-೨-

ಬಿಹಾರದ ಮಗ

ಜಯಪ್ರಕಾಶ್ ನಾರಾಯಣರು ಬಿಹಾರದ ಉತ್ತರದ ಗಡಿಯಲ್ಲಿನ ಸಿತಾಬ್ದಿಯಾರ ಎಂಬ ಗಂಗಾ ಮತ್ತು ಸರಜೂ ನದಿಗಳ ನಡುವಿರುವ ಒಂದು ಪುಟ್ಟ ಗ್ರಾಮದಲ್ಲಿ ಹರ್ಷದಯಾಳ್ ಬಾಬು ಮತ್ತು ಪೂಲ್‌ರಾಣಿ ದಂಪತಿಗಳ ಮಗನಾಗಿ, ೧೯೦೨ರ ಅಕ್ಟೋಬರ್ ೧೧ರಂದು ಜನಿಸಿದರು. ತಂದೆ ಹರ್ಷದಯಾಳ್ ಬಿಹಾರದ ಕೆರೆ-ಕಾಲುವೆ ಇಲಾಖೆಯಲ್ಲಿ ನೌಕರರಾಗಿದ್ದರು. ಜಯಪ್ರಕಾಶ್ ಮಗುವಾಗಿ ಸ್ವಲ್ಪ 'ಪೆದ್ದು ಮಗು' ಎನಿಸಿಕೊಂಡೇ ಹೆಚ್ಚಿನ ಚಟುವಟಿಕೆ ಇಲ್ಲದೆ ಬೆಳೆದರಾದರೂ, ಶಾಲೆ ಸೇರಿದ ಮೇಲೆ ಚುರುಕಾದರು. ಆದರೂ 'ಅಂತರ್ಮುಖಿ ಮಗು' ಎಂದೇ ಗುರುತಿಸಲ್ಪಟ್ಟಿದ್ದ ಅವರು ಪ್ರೌಢಶಿಕ್ಷಣಕ್ಕಾಗಿ ರಾಜ್ಯದ ರಾಜಧಾನಿ ಪಟ್ನಾದ ವಿದ್ಯಾರ್ಥಿನಿಲಯಕ್ಕೆ ಸೇರಿದ ಮೇಲೆ ಬಾಹ್ಯ ಪ್ರಪಂಚಕ್ಕೆ ಹೆಚ್ಚು ತೆರೆದುಕೊಳ್ಳುತ್ತಾ ತಮ್ಮದೇ ವಿಶಿಷ್ಟ ವ್ಯಕ್ತಿತ್ವ ರೂಪಿಸಿಕೊಳ್ಳತೊಡಗಿದರು.

ಜಯಪ್ರಕಾಶರು ಪಟ್ನಾ ಸೇರಿದ ಕಳೆದ ಶತಮಾನದ ಎರಡನೇ ದಶಕವೆಂದರೆ, ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟಕ್ಕೊಂದು ಆವೇಗ ದೊರೆತ ಕಾಲ. ಖುದಿರಾಮ್ ಬೋಸ್ ಪಟ್ನಾದಲ್ಲಿ ಬ್ರಿಟಿಷ್ ಪ್ರಭುತ್ವದ ವಿರುದ್ಧದ ಹೋರಾಟದ ಭಾಗವಾಗಿ ಬಾಂಬ್ ಸಿಡಿಸಿದ್ದ. ಇದರಿಂದ ಸ್ಫೂರ್ತಿ ಪಡೆದ

ಬಂಗಾಳದ ಕ್ರಾಂತಿಕಾರಿಗಳು ಬಿಹಾರದಾದ್ಯಂತ ಬುಡಮೇಲು ಕೃತ್ಯಗಳನ್ನು ಆರಂಭಿಸಿದ್ದರು. ಹದಿಹರೆಯದ ಜಯಪ್ರಕಾಶರು ಹೀಗೆ ಭುಗಿಲೆದ್ದಿದ್ದ ರಾಷ್ಟ್ರೀಯತೆಯ ಚಳುವಳಿಯಿಂದ ಪ್ರಭಾವಿತರಾಗ ದಿರಲು ಸಾಧ್ಯವೇ ಇರಲಿಲ್ಲ. ಆದರೆ ಕುಟುಂಬದ ಪ್ರಭಾವ ದಿಂದಾಗಿ 'ಭಗವದ್ಗೀತೆ'ಯನ್ನು ನಿಯಮಿತವಾಗಿ ಓದುತ್ತಾ, ಅದರ ಅನುಯಾಯಿಯೂ ಆಗಿದ್ದ ಅವರು ಇವೆರೆಡರ ನಡುವೆ ತಾತ್ವಿಕ ಸಂದಿಗ್ಧಕ್ಕೆ ಸಿಕ್ಕಿದ್ದಾಗ, ಅವರಿಗೆ ನೆರವಿಗೆ ಬಂದದ್ದು ಗಾಂಧೀಜಿಯ ಪಟ್ನಾ ಭೇಟಿ. ರಾಜಕಾರಣದ ಧಾರ್ಮಿಕತೆಯನ್ನು ಗಾಂಧಿ ಯವರ 'ಸತ್ಯಾಗ್ರಹ' ಪರಿಕಲ್ಪನೆಯಲ್ಲಿ ಕಂಡ ಜಯಪ್ರಕಾಶ್, ತಾವು ಕೇಳಿದ ಗಾಂಧಿಯವರ ಮೊದಲ ಭಾಷಣದಿಂದಲೇ ಅವರಿಗೆ ಮಾರುಹೋದರು. ಗಾಂಧಿ, ನಂತರದ ದಿನಗಳಲ್ಲಿ ಬಿಹಾರದ ಚಂಪಾರಣ್ಯದಲ್ಲೇ ಭಾರತದಲ್ಲಿನ ತಮ್ಮ ಮೊದಲ ಸತ್ಯಾಗ್ರಹವನ್ನು ಪ್ರಯೋಗಿಸಿ ಯಶಸ್ವಿಯಾದಾಗ, ಯುವ ಜಯಪ್ರಕಾಶ್ ಗಾಂಧೀಜಿಯಲ್ಲಿ ತಮ್ಮ ಭವಿಷ್ಯದ ನಾಯಕನನ್ನು ಕಂಡುಕೊಂಡರು.

ಜಯಪ್ರಕಾಶ್ ಪ್ರೌಢಶಿಕ್ಷಣವನ್ನು ಉತ್ತಮ ದರ್ಜೆಯಲ್ಲಿ ತೇರ್ಗಡೆಯಾಗಿ ಮುಗಿಸಿ, ಮುಂದಿನ ಶಿಕ್ಷಣಕ್ಕಾಗಿ ಸರ್ಕಾರದಿಂದ ವಿದ್ಯಾರ್ಥಿವೇತನ ಪಡೆದು ಅವರ ಕಾಯಸ್ಥ ಕುಲದಲ್ಲಿ ಭರವಸೆಯ ಯುವಕನೆನಿಸಿಕೊಂಡರು. ಇದರ ಪರಿಣಾಮವಾಗಿ ಹದಿನೆಂಟನೇ ವಯಸ್ಸಿನಲ್ಲಿ ಅವರಿಗೆ ಮದುವೆಯೂ ನಿಶ್ಚಯ ವಾಯಿತು. ಬಿಹಾರದ ಹೆಸರಾಂತ ವಕೀಲರೂ, ಚಂಪಾರಣ್ಯ ಸತ್ಯಾಗ್ರಹದ ಸಮಯದಲ್ಲಿ ಗಾಂಧೀಜಿಯ ನಿಕಟವರ್ತಿಯಾಗಿ ಕಾಂಗ್ರೆಸ್ ನಾಯಕರೂ ಎನಿಸಿಕೊಂಡಿದ್ದ ಬ್ರಿಜ್‌ಕಿಶೋರ್ ಬಾಬು ಅವರ ಮಗಳು ಪ್ರಭಾವತಿಯವರೊಂದಿಗೆ ೧೯೨೦ರ ಮೇ ೧೬ರಂದು ಅವರ ಮದುವೆಯಾಯಿತು. ಮುಂದೆ ಭಾರತದ ಮೊದಲ ರಾಷ್ಟ್ರಪತಿಯಾದ ಬಾಬು ರಾಜೇಂದ್ರಪ್ರಸಾದರ ಹತ್ತಿರದ

ಬಂಧುವಾದ ಬ್ರಜಕಿಶೋರ್‌ರ ಅಳಿಯನಾದ ಜಯಪ್ರಕಾಶ್, ಈ ಮೂಲಕ ಭಾರತದ ಒಂದು ದೊಡ್ಡ ರಾಜಕೀಯ ಕುಟುಂಬದ ಸದಸ್ಯರೇ ಆದರು. ಹಾಗೇ ಅವರು ಆ ದಿನಗಳಲ್ಲಿ ದಿನೇ ದಿನೇ ಕಾವೇರುತ್ತಿದ್ದ ರಾಷ್ಟ್ರೀಯ ಹೋರಾಟದ ಒಳವಲಯವನ್ನೇ ಪ್ರವೇಶಿಸಿದ್ದರು.

ಅಮೆರಿಕಾದಲ್ಲಿ ಕಮ್ಯೂನಿಸ್ಟರಾದ ಜೆಪಿ!

ರೌಲೆಟ್ ಕಾಯಿದೆ ವಿರೋಧಿ ಚಳುವಳಿ, ಅದರ ಪರಿಣಾಮವಾದ ಜಲಿಯನ್ ವಾಲ್‌ಬಾಗ್ ಹತ್ಯಾಕಾಂಡ; ಅದರ ವಿರುದ್ಧ ಪ್ರತಿಭಟನೆಯಾಗಿ ಗಾಂಧೀಜಿ ಕರೆಕೊಟ್ಟ ನಾಗರಿಕ ಅಸಹಕಾರ ಸತ್ಯಾಗ್ರಹ, ಇವು ಪಟ್ನಾದ ಕಾಲೇಜೊಂದರಲ್ಲಿ ವಿಜ್ಞಾನದ ವಿದ್ಯಾರ್ಥಿಯಾಗಿದ್ದ ಜಯಪ್ರಕಾಶರನ್ನು ತಮ್ಮ ವಿದ್ಯಾಭ್ಯಾಸದ ಬಗ್ಗೆ ದ್ವಂದ್ವಕ್ಕೆ ಸಿಲುಕಿಸಿದ್ದವು. ಆ ಸಂದರ್ಭದಲ್ಲಿ ಕೇಳಿದ ಮೌಲಾನಾ ಆಜ಼ಾದ್ ಅವರ ಭಾಷಣದಿಂದ ಪ್ರೇರಿತರಾಗಿ ಅವರು ತಮ್ಮ ಅನೇಕ ಸಹಪಾಠಿಗಳೊಂದಿಗೆ ಪರೀಕ್ಷೆ ಇನ್ನೇನು ಒಂದು ತಿಂಗಳಿದ್ದಂತೆಯೇ ಕಾಲೇಜು ತೊರೆದರು. ೧೯೨೨ರಲ್ಲಿ ಗಾಂಧೀಜಿಯ ಸತ್ಯಾಗ್ರಹ ಪರಿಕಲ್ಪನೆಯನ್ನು ಭಂಗಗೊಳಿಸುವ ರೀತಿಯಲ್ಲಿ ಜನ ಪೊಲೀಸರನ್ನು ಸುಟ್ಟ 'ಚೌರಿ ಚೌರ' ಹಿಂಸಾತ್ಮಕ ಘಟನೆ ನಡೆದು, ಗಾಂಧಿ ಅಸಹಕಾರ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳುವವರೆಗೂ ಜಯಪ್ರಕಾಶ್‌ರು ಶಿಕ್ಷಣದ ಬಗ್ಗೆ ಯೋಚಿಸಲಿಲ್ಲ. ನಂತರ ಬಿಹಾರ ವಿದ್ಯಾಪೀಠ ಸೇರಿ ಇಂಟರ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಆದರೆ ಮುಂದೆ ವಿಜ್ಞಾನ ಪದವಿ ಪಡೆಯಲು; ಅಸಹಕಾರ ಸತ್ಯಾಗ್ರಹದ ಕರೆಗೆ ವಿರುದ್ಧವಾಗಿ ಸರ್ಕಾರದಿಂದ ಅನುದಾನ ಪಡೆಯುತ್ತಿದ್ದ ಬನಾರಸ್ ಹಿಂದೂ ವಿಶ್ವವಿದ್ಯಾಲಯಕ್ಕೆ ಸೇರಲು ನಿರಾಕರಿಸಿದರು. ಕೊನೆಗೆ ಕುಟುಂಬದ ಹಿತೈಷಿಯೊಬ್ಬರ ಸಲಹೆಯಂತೆ 'ದುಡಿದು ಓದುವ'

ಯೋಜನೆಯ ಮೇರೆಗೆ ಅಮೆರಿಕಾದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಲು ನಿರ್ಧರಿಸಿದರು. ೧೯೨೨ರ ಅಕ್ಟೋಬರ್ ೮ರಂದು ಅವರು ಅಮೇರಿಕಾಕ್ಕೆ ಪ್ರಯಾಣ ಮಾಡಿದರು.

ಅಮೆರಿಕಾದಲ್ಲಿನ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯಕ್ಕೆ ಸೇರಿಕೊಂಡ ಜಯಪ್ರಕಾಶರು ಅಲ್ಲಿನ ಅತಿ ಆಡಂಬರದ ಮತ್ತು ಕೆಲವರ ಅತಿ ಶೀಮಂತಿಕೆಯ ವಿರುದ್ಧ ಪ್ರತಿಭಟನೆಯಾಗಿ ಆರಂಭವಾಗಿದ್ದ ಎಡಪಂಥೀಯ ಚಳುವಳಿಯಿಂದ ಪ್ರಭಾವಿತರಾದರು. ಇದರ ಪರಿಣಾಮವಾಗಿ ಒಂದು ವರ್ಷದ ನಂತರ ವಿಜ್ಞಾನ ಅಧ್ಯಯನವನ್ನು ತೊರೆದು ಓಹಿಯೋ ವಿಶ್ವವಿದ್ಯಾಲಯದಲ್ಲಿ ಕಲಾ ಅಧ್ಯಯನದ ತರಗತಿಗಳಿಗೆ ಸೇರಿಕೊಂಡರು. ವಿದ್ಯಾಭ್ಯಾಸದ ಮತ್ತು ಇತರೆ ಖರ್ಚುಗಳಿಗಾಗಿ ಅವರು ಹೋಟೆಲುಗಳಲ್ಲಿ ಮತ್ತು ಹಣ್ಣಿನ ರಸ ತೆಗೆಯುವ ಅಂಗಡಿಗಳಲ್ಲಿ ದಿನಗೂಲಿ ಕೆಲಸ ಮಾಡುತ್ತಿದ್ದರು. ತಾವು ವಾಸಿಸುತ್ತಿದ್ದ ಮತ್ತು ದುಡಿಯುತ್ತಿದ್ದ ಕಡೆಗಳೆಲ್ಲೆಲ್ಲ ಕಂಡ ಬಡತನ ಮತ್ತು ಆವರಿಸಿದ್ದ ಕಾರ್ಮಿಕ ಪರ ಚಿಂತನೆ ಮತ್ತು ಚಟುವಟಿಕೆ ಗಳಿಂದ ಅವರು ಪ್ರಭಾವಿತರಾಗತೊಡಗಿದರು. ಜೊತೆಗೆ ಕೆಲವು ಕಾರ್ಮಿಕ ನಾಯಕರೂ ಇವರ ಸ್ನೇಹಿತರಾದರು. ಇದರ ಫಲವಾಗಿ ಅವರು ಅಂದಿನ ಯುವಜನತೆಯ ಬೌದ್ಧಿಕ ಆಕರ್ಷಣೆ ಯಾಗಿದ್ದ ಮಾರ್ಕ್ಸ್‌ವಾದದ ಆಳವಾದ ಅಧ್ಯಯನಕ್ಕೆ ತೊಡಗಿದರು. ಮಾರ್ಕ್ಸ್‌ವಾದ ಹೇಳುವ ಜಾಗತಿಕ ಕಾರ್ಮಿಕ ಕ್ರಾಂತಿ ಹಾಗೂ ಕಾರ್ಮಿಕರ ಸರ್ವಾಧಿಕಾರ ಇವುಗಳೇ ಜಗತ್ತಿನಲ್ಲಿ ಕಾಣುವ ಎಲ್ಲ ರೀತಿಯ ಶೋಷಣೆಗೆ ಮದ್ದು ಎಂದು ಭಾವಿಸಿದರು. ತಮ್ಮ ವಿಶ್ವದ್ಯಾಲಯದ ಆವರಣದಲ್ಲಿ ಅಮೆರಿಕಾದ ಕಮ್ಯೂನಿಸ್ಟ್ ಪಕ್ಷ ಏರ್ಪಡಿಸುತ್ತಿದ್ದ ಸಂಜೆಯ ವಿಚಾರ ಗೋಷ್ಠಿಗಳಲ್ಲಿ ಜಯಪ್ರಕಾಶರು ಸಕ್ರಿಯವಾಗಿ ಭಾಗವಹಿಸ

ತೊಡಗಿದರು. ಇವರ ಶ್ರದ್ಧೆ ಮತ್ತು ಬುದ್ಧಿಮತ್ತೆಯನ್ನು ನೋಡಿ
ಅಲ್ಲಿನ ಕಮ್ಯೂನಿಸ್ಟ್ ಕಾರ್ಯಕರ್ತರು ಅವರನ್ನು ಹೆಚ್ಚಿ
ವಿದ್ಯಾಭ್ಯಾಸಕ್ಕಾಗಿ ಮಾಸ್ಕೋಗೆ ಕಳಿಸುವ ಎಲ್ಲ ವ್ಯವ
ಮಾಡುತ್ತಿದ್ದಾಗಲೇ, ತಾಯಿಯ ಆರೋಗ್ಯ ಕೆಟ್ಟ ಸುದ್ದಿ ಬಂತು
ಹಾಗಾಗಿ ಜಯಪ್ರಕಾಶರು ೧೯೨೯ರಲ್ಲಿ ಸ್ನಾತಕೋತ್ತರ ಪದ
ಪಡೆದು ಭಾರತಕ್ಕೆ ವಾಪಸ್ಸಾಗಬೇಕಾಯಿತು.

-೩-

ಮಾರ್ಕ್ಸ್‌ನೋ ಗಾಂಧಿಯೋ?

ಜಯಪ್ರಕಾಶರು ಒಬ್ಬ ಕಟ್ಟಾ ಕಮ್ಯೂನಿಸ್ಟರಾಗಿ
ಪರಿವರ್ತಿತರಾಗಿ ಭಾರತಕ್ಕೆ ವಾಪಸ್ಸಾಗಿದ್ದರು. ಖಾಸಗಿ ಆಸ್ತಿ
ನಿಷೇಧ ಮತ್ತು ಕಾರ್ಮಿಕರ ಸರ್ವಾಧಿಕಾರಗಳಲ್ಲಿ ಅವರಿ
ಬಲವಾದ ನಂಬಿಕೆ ಮೂಡಿತ್ತು. ಆದರೆ ಈ ಹೊತ್ತಿಗೆ ಅವ
ಹೆಂಡತಿ ಗಾಂಧೀಜಿಯ ಆಶ್ರಮ ಸೇರಿ ಗಾಂಧಿ ಆಪ್ತ ಪರಿವಾರ
ಕಾರ್ಯಕರ್ತೆಯಾಗಿ ಪರಿವರ್ತಿತರಾಗಿದ್ದರು! ಈಗ ಎಲ್ಲರಿಂ
ಜೆ.ಪಿ. ಎಂದೇ ಎಲ್ಲರಿಂದ ಕರೆಯಲ್ಪಡುತ್ತಿದ್ದ ಜಯಪ್ರಕಾಶರ
ತಮ್ಮ ಹೆಂಡತಿಯನ್ನು ಕಾಣಲು ಸಾಬರ್ಮತಿ ಆಶ್ರಮ
ಹೋದಾಗ, ಅವರ ಪತ್ನಿ ಗಾಂಧಿ ಪ್ರೇರಣೆಯಿಂದ ಬ್ರಹ್ಮಚರ್ಯ
ಪ್ರತಿಜ್ಞೆ ಸ್ವೀಕರಿಸಿರುವುದನ್ನು ಅವರಿಗೆ ತಿಳಿಸಿದರು
ಆಶ್ಚರ್ಯವೆಂದರೆ ಪತ್ನಿಯನ್ನು ಬಹುವಾಗಿ ಪ್ರೀತಿಸುತ್ತಿದ್ದ ಜೆ.ಪಿ
ತಮ್ಮ ಪತ್ನಿಯ ಪ್ರತಿಜ್ಞೆಯನ್ನು ಗೌರವಿಸಲು ತೀರ್ಮಾನಿಸಿದರು
ಇಲ್ಲಿ ಆರಂಭವಾಯಿತು ಅವರ ರಾಜಕೀಯ ಜೀವನದ ದೊ
ದ್ವಂದ್ವ: ಮಾರ್ಕ್ಸ್‌ನೋ, ಗಾಂಧಿಯೋ?

ಬುದ್ಧಿಯಿಂದ ಮಾರ್ಕ್ಸ್‌ನಿಗೆ ಮಾರು ಹೋಗಿದ್ದ ಜೆ.ಪಿ

ಹೃದಯದಿಂದ ಗಾಂಧಿಗೆ ಶರಣಾಗಿದ್ದರು. ತಮ್ಮ ಪತ್ನಿಯ ಮೂಲಕ ಮುಂದೆ ಗಾಂಧೀಜಿಯ ನಿಕಟ ಸಂಪರ್ಕಕ್ಕೆ ಬಂದು, ಅವರಿಗೆ ಬಹು ಪ್ರಿಯನಾದ ಹೋರಾಟಗಾರನೇ ಆದ ಜೆ.ಪಿ., ಗಾಂಧಿ ಮತ ಮೂರ್ಖನೊಬ್ಬನ ಗುಂಡಿಗೆ ಬಲಿಯಾಗಿ ರಾಷ್ಟ್ರ ಜೀವನದಿಂದ ತೆರಳುವವರೆಗೆ, ಅವರ ತಾತ್ವಿಕ ಅನುಯಾಯಿಯಾಗಲು ನಿರಾಕರಿಸಿದರು! ಆದರೆ ಆವರೆಗೆ ಅವರು ಅದರ ಎಲ್ಲ ಅರ್ಥಗಳಲ್ಲಿ ಕಮ್ಯೂನಿಸ್ಟರೂ ಆಗಿರಲಿಲ್ಲ ಎಂದೇ ಹೇಳಬೇಕು. ಆಗ ಭಾರತದಲ್ಲಿ ಕಮ್ಯೂನಿಸ್ಟರು ರಾಷ್ಟ್ರೀಯ ಚಳುವಳಿಯನ್ನು ಅಗೌರವದ ಭಾಷೆಯಲ್ಲಿ ನಿಂದಿಸುತ್ತಾ, ವೈಯಕ್ತಿಕವಾಗಿ ತಾವು ಬಹುವಾಗಿ ಗೌರವಿಸುತ್ತಿದ್ದ ಗಾಂಧೀಜಿಯ ನಾಯಕತ್ವದ ಬಗ್ಗೆ ಅಪಮಾನಕಾರಿಯಾಗಿ ಮಾತನಾಡುತ್ತಿದ್ದರು. ಹಾಗಾಗಿ, ತೀವ್ರ ರಾಷ್ಟ್ರೀಯವಾದಿಯೂ ಆಗಿದ್ದ ಜೆ.ಪಿ., ಕಾಂಗ್ರೆಸ್‌ನಲ್ಲಿಯೇ ಬಂಡುಕೋರರಾಗಿ ಉಳಿದರು. ಹಾಗೇ, 'ವಸಾಹತುಶಾಹಿ ದೇಶಗಳಲ್ಲಿ ಕಮ್ಯೂನಿಸ್ಟರು ಯಾವುದೇ ಸಂದರ್ಭದಲ್ಲಿ, ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟ ಬೂರ್ಜ್ವಾ ಅಥವಾ ಬಂಡವಾಳಶಾಹಿಗಳ ನಾಯಕತ್ವದಲ್ಲಿ ನಡೆಯುತ್ತಿದೆ ಎಂಬ ಕಾರಣದ ಮೇಲೆ ಅದರಿಂದ ದೂರಾಗಬಾರದು' ಎಂಬ ಲೆನಿನ್ನನ ಸೂಚನೆಯನ್ನು ಭಾರತೀಯ ಕಮ್ಯೂನಿಸ್ಟರು ನಿರ್ಲಕ್ಷಿಸಿ, ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಬ್ರಿಟಿಷ್ ಸರ್ಕಾರಕ್ಕೆ ಗುಪ್ತ ಮಾಹಿತಿ ನೀಡುತ್ತಿದ್ದ ಪರಿಯೂ ಅವರು ಕಮ್ಯೂನಿಸ್ಟ್ ಪಕ್ಷ ಸೇರಲು ಅಡ್ಡಿಯಾಯಿತು.

ಭಾರತಕ್ಕೆ ಹಿಂದಿರುಗಿದ ತದನಂತರದಲ್ಲೇ ಗಾಂಧಿ ಮತ್ತು ನೆಹರೂ ಅವರೊಂದಿಗೆ ಅವರು ಭಾಗವಹಿಸಿದ ಲಾಹೋರ್ ಕಾಂಗ್ರೆಸ್ ಅಧಿವೇಶನದಲ್ಲಿ 'ಇಂಕ್ವಿಲಾಬ್ ಝಿಂದಾಬಾದ್' ಮುಂತಾದ ಎಡಪಂಥೀಯ ಘೋಷಣೆಗಳು ಕೇಳಿಬಂದವು. ಇದು, ಅವರು ಕಾಂಗ್ರೆಸ್‌ನೊಳಗೇ ಎಡಪಂಥೀಯತೆಯನ್ನೂ,

ಕ್ರಾಂತಿಕಾರತ್ವವನ್ನು ಪೋಷಿಸುವ, ಬೆಳೆಸುವ ಆಸೆಯನ್ನು ಅವರಲ್ಲಿ ಹುಟ್ಟಿಸಿತು. ಅದಕ್ಕೆ ಪೂರಕವಾಗಿ ಸೋವಿಯತ್ ಒಕ್ಕೂಟದ ಪ್ರವಾಸ ಮಾಡಿ ಬಂದು ಅಲ್ಲಿನ ಕಾರ್ಮಿಕ ಪ್ರಭುತ್ವದ ಆರಂಭಿಕ ಉತ್ಸಾಹ ನೋಡಿ ಪುಳಕಿತರಾಗಿ ತಮ್ಮನ್ನು ಎಡಪಂಥೀಯರೆಂದು ಕರೆದುಕೊಳ್ಳುತ್ತಿದ್ದ ಕಾಂಗ್ರೆಸ್ಸಿನ ಯುವನಾಯಕ ಜವಾಹರ್‌ಲಾಲ್ ನೆಹರೂ, ಜೆ.ಪಿ. ಅವರಿಗೆ ಕಾಂಗ್ರೆಸ್ ಪಕ್ಷದ ಕಾರ್ಮಿಕ ವಿಭಾಗದ ಕಾರ್ಯದರ್ಶಿ ಸ್ಥಾನ ನೀಡಿ, ನಂತರ ಪಕ್ಷದ ಶಾಶ್ವತ ಕಾರ್ಯದರ್ಶಿಯನ್ನಾಗಿ ಮಾಡಿ ತಮ್ಮ ಆಪ್ತರೊಬ್ಬರನ್ನಾಗಿಸಿಕೊಂಡರು. ಜೆಪಿ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಜೊತೆ ಸಂಪರ್ಕ ಬೆಳೆಸಿಕೊಂಡು, ಭಾರತದ ಕಾರ್ಮಿಕರ ಕಲ್ಯಾಣಕ್ಕಾಗಿ ಕಾಂಗ್ರೆಸ್ ಆಂದೋಲನ ಏನೇನು ಮಾಡಬಹುದು ಎಂಬುದರ ಒಂದು ಅಧ್ಯಯನ ಕೈಗೊಂಡರು. ಹಾಗೇ ಕಾರ್ಖಾನೆಗಳು ಮತ್ತು ತೋಟಗಳ ಕಾರ್ಮಿಕ ನಾಯಕರೊಡನೆ ಸಮಾಲೋಚಿಸಿ, ಕಾರ್ಮಿಕರನ್ನು ಬ್ರಿಟಿಷ್ ಪ್ರಭುತ್ವದ ವಿರುದ್ಧ ಸಂಘಟಿಸುವ ಮಾದರಿಗಳನ್ನು ಕುರಿತು ಚರ್ಚಿಸಿದರು.

ಕಾಂಗ್ರೆಸ್‌ನ ಮಿದುಳು ಬಂಧನದಲ್ಲಿ!

ಈ ಮಧ್ಯೆ, ಬ್ರಿಟಿಷ್ ಸರ್ಕಾರ ಭಾರತಕ್ಕೆ ಪೂರ್ಣ ಸ್ವಾತಂತ್ರ್ಯ ನೀಡುವ ಹಾದಿಯಲ್ಲಿನ ಮಾರ್ಗದಂತೆ ತೋರಿದ 'ಡೊಮಿನಿಯನ್' ಸ್ಥಾನಮಾನ ನೀಡುವ ವಾಗ್ದಾನವನ್ನು ಈಡೇರಿಸದೇ ಹೋದಾಗ, 'ಚೌರಿ ಚೌರ' ಘಟನೆಯಿಂದಾಗಿ ಸ್ಥಗಿತಗೊಳಿಸಲಾಗಿದ್ದ ಅಸಹಕಾರ ಚಳುವಳಿ ಮತ್ತೆ ಆರಂಭ ವಾಯಿತು. ಗಾಂಧಿ ಈ ಬಾರಿ ಉಪ್ಪಿನ ಕಾನೂನನ್ನು ಮುರಿಯಲು ದಂಡಿ ಸತ್ಯಾಗ್ರಹ ಆರಂಭಿಸಿದರು. ಇದರಲ್ಲಿ ಸಕ್ರಿಯವಾಗಿ

ಭಾಗವಹಿಸಲು ಉತ್ಸುಕರಾಗಿದ್ದ ಜೆ.ಪಿ., ತಾಯಿಯ ತೀವ್ರ ಅನಾರೋಗ್ಯ ಮತ್ತು ನಂತರದ ಸಾವಿನ ಕಾರಣದಿಂದಾಗಿ ಭಾಗವಹಿಸಲಾಗಲಿಲ್ಲ. ದಂಡಿ ಸತ್ಯಾಗ್ರಹದ ಪರಿಣಾಮವಾಗಿ ಬ್ರಿಟಿಷ್ ಸರ್ಕಾರ ಮತ್ತೆ ಗಾಂಧೀಜಿಯನ್ನು ಎರಡನೇ ದುಂಡು ಮೇಜಿನ ಪರಿಷತ್ತನ್ನು ಆಯೋಜಿಸಿ ಸಂಧಾನಕ್ಕೆ ಕರೆಯು ವಂತಾಯಿತು. ಆದರೆ ರಾಜ ಸಂಸ್ಥಾನಗಳು, ಅಲ್ಪಸಂಖ್ಯಾತರು ಮತ್ತು ದಲಿತರ ಪ್ರತ್ಯೇಕತೆಯನ್ನು ಮಾನ್ಯಮಾಡಿ, ಸ್ವಾತಂತ್ರ್ಯ ನೀಡಿಕೆಯ ಸ್ವರೂಪವನ್ನು ನಿರ್ಧರಿಸುವ ಬ್ರಿಟಿಷ್ ಸರ್ಕಾರದ ದುರುದ್ದೇಶಿತ ಸಲಹೆಯಿಂದಾಗಿ ಈ ಸಂಧಾನವೂ ಮುರಿದುಬಿತ್ತು.

ಮತ್ತೆ ಮತ್ತೆ ಬ್ರಿಟಿಷರೊಂದಿಗೆ ಸಂಧಾನದ ಪ್ರಯತ್ನ ಮಾಡುವ ಗಾಂಧೀಜಿಯ ಗುಣದಿಂದ ಮೊದಲಿಂದಲೂ ತಪ್ತರಾಗಿದ್ದ, ಅಸಮಧಾನಗೊಂಡಿದ್ದ ಸುಭಾಷರೂ ಸೇರಿದಂತೆ ಕಾಂಗ್ರೆಸ್ಸಿನ ಯುವಗುಂಪು ಈಗ ಅಸಹಕಾರ ಚಳುವಳಿಯನ್ನು ತೀವ್ರಗೊಳಿಸುವಂತೆ ಗಾಂಧೀಜಿ ಮೇಲೆ ಒತ್ತಡ ಹೇರಿತು. ಇದರ ಪರಿಣಾಮವಾಗಿ ಗಾಂಧೀಜಿ ಸರ್ಕಾರದೊಡನೆ ಇನ್ನು ಸಂಧಾನ ಸಾಧ್ಯವಿಲ್ಲ ಎಂದು ಘೋಷಿಸಿ ವಿದೇಶಿ ಉತ್ಪನ್ನಗಳನ್ನು ನಿಷೇಧಿಸ ಬೇಕೆಂದು ಕರೆಕೊಟ್ಟಾಗ, ಸರ್ಕಾರ ಕಾಂಗ್ರೆಸ್ಸಿನ ಎಲ್ಲಾ ನಾಯಕ ರನ್ನೂ ಬಂಧಿಸಿತು. ಬಂಧನದಿಂದ ತಪ್ಪಿಸಿಕೊಂಡ ಜೆ.ಪಿ., ಭೂಗತರಾಗಿ ಸರ್ಕಾರದ ವಿರುದ್ಧ ಚಳುವಳಿಯನ್ನು ಸಂಘಟಿಸ ತೊಡಗಿದರಾದರೂ, ೧೯೩೨ರ ಸೆಪ್ಟೆಂಬರ್ ೭ ರಂದು ಅವರನ್ನು ಮದ್ರಾಸ್ ರೈಲ್ವೇ ನಿಲ್ದಾಣದಲ್ಲಿ ಬಂಧಿಸಲಾಯಿತು. ಈ ಸುದ್ದಿಗೆ ವಾರ್ತಾ ಪತ್ರಿಕೆಗಳಲ್ಲಿ 'ಕಾಂಗ್ರೆಸ್ ಮಿದುಳು ಬಂಧನದಲ್ಲಿ' ಎಂಬ ಶೀರ್ಷಿಕೆ ನೀಡಲಾಗಿತ್ತು ಎಂದರೆ, ಆ ಹೊತ್ತಿಗೆ ಜೆ.ಪಿ. ಕಾಂಗ್ರೆಸ್ ಸಂಘಟನೆಯಲ್ಲಿ ಎಂತಹ ಮಹತ್ವದ ಸ್ಥಾನಗಳಿಸಿದ್ದರು ಎಂಬುದು ಗೊತ್ತಾಗುತ್ತದೆ.

ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದ ಉದಯ

ಜೆ.ಪಿ.ಯವರ ಈ ಮೊದಲ ಸೆರೆಮನೆವಾಸದ ಅವಧಿಯಲ್ಲೇ ಭಾರತದ ಸಮಾಜವಾದಿ ಚಳುವಳಿಯ ಅಂಕುರವಾದದ್ದು. ನಾಸಿಕ್ ಸೆರೆಮನೆಯಲ್ಲಿ ಅವರೊಂದಿಗೆ ಅಶೋಕ ಮೆಹ್ತಾ, ಅಚ್ಯುತ್ ಪಟವರ್ಧನ್, ಯೂಸುಫ್ ಮೆಹ್ರೋಲಿ, ಮಿನೂ ಮಸಾನಿ ಮುಂತಾದ ಯುವ ಕಾಂಗ್ರೆಸ್ ನಾಯಕರೂ ಬಂಧನದಲ್ಲಿದ್ದರು. ಇವರೆಲ್ಲರೂ ಗಾಂಧಿ ಮಾರ್ಗದ ಸತತ ಸೋಲಿನಿಂದ ವ್ಯಾಕುಲಗೊಂಡು, 'ನೇರ ಹೋರಾಟ'ದ ಮಾರ್ಗಕ್ಕಾಗಿ ಕಾತರಿಸುತ್ತಿದ್ದರು. ಮಾರ್ಕ್ಸ್‌ವಾದ ಮತ್ತು ಸೋವಿಯತ್ ಕ್ರಾಂತಿಯಿಂದ ಪ್ರಭಾವಿತವಾಗಿದ್ದ ಈ ಗುಂಪು ಸೆರೆಮನೆಯಲ್ಲೇ ಪರಸ್ಪರ ಸಮಾಲೋಚನೆಯಲ್ಲಿ ತೊಡಗಿ, ಕಾಂಗ್ರೆಸ್‌ನಲ್ಲಿಯೇ ಎಡಪಂಥೀಯ ಗುಂಪೊಂದನ್ನು ಸಂಘಟಿಸಲು ನಿರ್ಧರಿಸಿತು.

ಜೆ.ಪಿ. ಸೆರೆಮನೆಯಿಂದ ಆಚೆ ಬಂದೊಡನೆ ಮಾಡಿದ ಮೊದಲ ಕೆಲಸವೆಂದರೆ, ಈಗಾಗಲೇ ಭಾರತದ ರಾಜಕಾರಣದಲ್ಲಿ 'ಸಮಾಜವಾದ'ದ ಚರ್ಚೆ ಆರಂಭಿಸಿದ್ದ ಆಚಾರ್ಯ ನರೇಂದ್ರ ದೇವ, ಸಂಪೂರ್ಣಾನಂದ ಮುಂತಾದ ಎಡಪಂಥೀಯ ಆಲೋಚನೆಯ ಗೆಳೆಯರನ್ನೆಲ್ಲ ಒಟ್ಟುಗೂಡಿಸಿ ಭಾರತದ ಸಮಾಜವಾದಿ ಪಕ್ಷವೊಂದನ್ನು ಸ್ಥಾಪಿಸಲು ನಿರ್ಧರಿಸಿದ್ದು. ಅದರ ನೀತಿ ಮತ್ತು ಅಂಗರಚನೆಯ ಕರಡನ್ನು ಜೆ.ಪಿ.ಯವರೇ ಸಿದ್ಧಪಡಿಸಿದರು. ೧೯೩೪ರ ಮುಂಬೈ ಕಾಂಗ್ರೆಸ್ ಅಧಿವೇಶನದ ಸಮಯದಲ್ಲೇ ಅಕ್ಟೋಬರ್ ೨೧, ೨೨ರಂದು ಆಚಾರ್ಯ ನರೇಂದ್ರದೇವ ಅವರ ಹಿರಿತನದಲ್ಲಿ ಅಶೋಕ ಮೆಹ್ತಾ, ಅಚ್ಯುತ ಪಟವರ್ಧನ, ಮಿನೂ ಮಸಾನಿ, ಕಮಲಾದೇವಿ ಚಟ್ಟೋಪಾಧ್ಯಾಯ, ಯೂಸುಫ್ ಮೆಹ್ರೂಲಿ ಅವರನ್ನೊಳ

ಗೊಂಡಂತೆ ೧೫೦ ಜನ ಎಡಪಂಥೀಯ ಗೆಳೆಯರ ಸಮ್ಮುಖ ದಲ್ಲಿ ಅವರು ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದ ಸ್ಥಾಪನೆಯನ್ನು ಘೋಷಿಸಿದರು. ಡಾ. ಸಂಪೂರ್ಣಾನಂದ ಅಧ್ಯಕ್ಷರಾದರೆ, ಸ್ವತಃ ಜೆ.ಪಿ. ಕಾರ್ಯದರ್ಶಿಯಾದರು.

ಎಲ್ಲ ರೀತಿಯ ಶೋಷಣೆ, ಲಾಭಬಡುಕತನ ಮತ್ತು ಬಡತನಗಳ ನಿರ್ಮೂಲನೆಗಾಗಿ ರಾಷ್ಟ್ರದ ಸಂಪತ್ತಿನ ಸಾಮೂಹಿಕ ಒಡೆತನ ಮತ್ತು ಸಮಾನ ವಿತರಣೆಯ ನೀತಿಯನ್ನು ಪಕ್ಷ ಘೋಷಿಸಿತು. ಧರ್ಮ ನಿರಪೇಕ್ಷ ಪ್ರಭುತ್ವ, ಜಾತಿ ರಹಿತ ಮತ್ತು ಲಿಂಗಬೇಧವಿಲ್ಲದ ಸಮಾಜ ಮತ್ತು ಸರ್ವರಿಗೂ ಸಮಾನ ಅವಕಾಶಗಳ ತತ್ವಗಳನ್ನು ಪ್ರತಿಪಾದಿಸುವುದಾಗಿ ಹೇಳಿಕೊಂಡಿತು. ಇದಕ್ಕಾಗಿ ವರ್ಗ ಹೋರಾಟದ ಮಾರ್ಗವನ್ನು ಪ್ರತಿಪಾದಿಸಿತು. ಇದರ ಅಂಗವಾಗಿ ಭೂಮಾಲೀಕರಿಂದ ಯಾವುದೇ ಪರಿಹಾರ ನೀಡದೆ ಜನರಿಗೆ ಸೇರಿದ ಭೂಮಿಯನ್ನು ವಶಪಡಿಸಿಕೊಂಡು ಸಾಮುದಾಯಿಕ ಕೃಷಿ ಆರಂಭಿಸುವುದು, ಎಲ್ಲ ಬೃಹತ್ ಕಾರ್ಖಾನೆ, ಉದ್ಯಮ ಹಾಗೂ ಬ್ಯಾಂಕುಗಳನ್ನು ಸಾಮಾಜೀಕರಿಸಿ ಸಹಕಾರಿ ತತ್ವದ ಮೇಲೆ ನಡೆಸುವುದು, ಸಾಮಾನ್ಯ ರೈತರ ಮತ್ತು ಕುಶಲ ಕರ್ಮಿಗಳ ಎಲ್ಲ ಸಾಲಗಳ ರದ್ದತಿ, ಎಲ್ಲ ರಾಜ ಮಹಾರಾಜರ ಸ್ಥಾನಮಾನಗಳ ನಿಷೇಧ ಮತ್ತು ಇಂಗ್ಲೆಂಡಿಗೆ ನೀಡಬೇಕಾದ ಸಾಲವನ್ನು, ಅದು ಸಾಮ್ರಾಜ್ಯಶಾಹಿ ಶೋಷಣೆಯ ಫಲವೆಂದು ಪರಿಗಣಿಸಿ ಅಸಿಂಧುಗೊಳಿಸುವುದು ಇತ್ಯಾದಿಗಳನ್ನು ತನ್ನ ಕಾರ್ಯಕ್ರಮಗಳೆಂದು ಘೋಷಿಸಿತು. ಇದರ ಹಿಂದಿದ್ದುದು ಜೆಪಿಯವರ ಮಾರ್ಕ್ಸ್‌ವಾದಿ ಮನಸ್ಸು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಜೆಪಿ ಪತ್ನಿ ಗಾಂಧಿ ಒತ್ತೆಯಾಳು!

ಪಕ್ಷ ಕಾಂಗ್ರೆಸ್ ಸಂಘಟನೆಯ ಅಡಿಯಲ್ಲೇ ಒಂದು ಉಪ ಪಕ್ಷವಾಗಿ ಕೆಲಸ ಮಾಡಲು ತೀರ್ಮಾನಿಸಲಾಯಿತಾದರೂ,

೧೯೩೬ರ ಮೀರತ್ ಅಧಿವೇಶನದ ಹೊತ್ತಿಗೆ ಅದು ತನ್ನನ್ನು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಕ್ಷವೆಂದು ಘೋಷಿಸಿಕೊಂಡಿತು. ಈ ಬಗ್ಗೆ ಜೆ.ಪಿ. ವಿರುದ್ಧ ಗಾಂಧೀಜಿಗೆ ದೂರಿತ್ತಾಗ ಅವರು, 'ಜೆ.ಪಿ. ಮತ್ತು ಆತನ ಗೆಳೆಯರ ಬಗ್ಗೆ ಚಿಂತೆ ಬೇಡ. ಆತನ ಹೆಂಡತಿ ಒತ್ತೆಯಾಳಾಗಿ ನನ್ನ ಬಳಿ ಇದ್ದಾಳೆ!' ಎಂದರಂತೆ! ಆದರೆ ಜೆ.ಪಿ., ಗಾಂಧೀಜಿಯನ್ನು ಭೇಟಿ ಮಾಡಿದಾಗಲೆಲ್ಲ ಬಗ್ಗಿ ಅವರ ಕಾಲ್ಮುಟ್ಟಿ ನಮಸ್ಕರಿಸುತ್ತಿದ್ದರಾದರೂ, ಅವರೊಂದಿಗೆ ವೈಚಾರಿಕ ಸಂಘರ್ಷಕ್ಕೂ ಇಳಿಯುತ್ತಿದ್ದರು. ಅವರ ಮಾರ್ಗದಿಂದ ಸ್ವಾತಂತ್ರ್ಯ-ಸ್ವರಾಜ್ಯ ಎರಡೂ ಸಾಧ್ಯವಿಲ್ಲ ಎಂದು ವಾದಿಸುತ್ತಿದ್ದರು. ಭೂಮಿ ಸೇರಿದಂತೆ ಎಲ್ಲ ಸಾಧನ-ಸಂಪತ್ತುಗಳ ಸರ್ಕಾರಿ ಒಡೆತನವನ್ನು ಪ್ರತಿಪಾದಿಸುತ್ತಿದ್ದರು. ಬ್ರಿಟಿಷರ ವಿರುದ್ಧ ನೇರ ಹೋರಾಟವೇ ಸೂಕ್ತ ಎಂದು ಹೇಳುತ್ತಿದ್ದರು! ಗಾಂಧಿಯವರ ಅಹಿಂಸೆಯನ್ನು ಒಂದು ರಾಜಕೀಯ ಸಿದ್ಧಾಂತವಾಗಿ ಸ್ವೀಕರಿಸಲು ಅವರು ನಿರಾಕರಿಸಿದರು. ಈ ಸಂಬಂಧ ಇವರಿಬ್ಬರ ನಡುವೆ ನಡೆದ ಒಂದು ಸಂವಾದದ ಮಾದರಿ ಹೀಗಿದೆ:

'ನಾನು ರೈತವರ್ಗವನ್ನು ಸಂಘಟಿಸುವೆ. ಕಾರ್ಮಿಕ ಆಂದೋಲನವನ್ನು ರೂಪಿಸುವೆ. ಆದರೆ ನಿಮ್ಮ ಹರಿಜನ ಸೇವೆ, ಖಾದಿ ಪ್ರಚಾರ ನನಗೆ ಬೇಕಿಲ್ಲ. ಇದರಿಂದ ನಮಗೆ ಸ್ವಾತಂತ್ರ್ಯ ದೊರಕಲಾರದು. ನಮ್ಮ ಹಳ್ಳಿಗಳೂ ಉದ್ಧಾರವಾಗಲಾರವು.'

'ನೀನು ಮಾಡಬೇಕೆಂದಿರುವ ಕೆಲಸಗಳು ಬಹಳ ಒಳ್ಳೆಯವು ಜಯಪ್ರಕಾಶ್. ಆದರೆ ನಾನು ಹೇಳುವ ಅಹಿಂಸೆ ಯಲ್ಲೂ ಒಂದಿಷ್ಟು ಅರ್ಥವಿದೆ'

'ಅಹಿಂಸೆ ನನ್ನ ಸಿದ್ಧಾಂತವಲ್ಲ. ಸಮಾಜದ ಪುನರ್ ನಿರ್ಮಾಣಕ್ಕೆ ಅದು ತಾತ್ವಿಕ ಸ್ಫೂರ್ತಿಯಾಗಲಾರದು.'

'ಆದರೆ ಅದು ಪಂಥ ಬೇಡ, ಅಸ್ತ್ರವಾಗಬಲ್ಲದು ಎಂದು

ಒಪ್ಪಿಕೊಂಡರೆ ನನಗಷ್ಟೇ ಸಾಕು'

'ಅಹಿಂಸಾತ್ಮಕ ಸತ್ಯಾಗ್ರಹದಿಂದ ನಮಗೆ ಅಧಿಕಾರ ದೊರೆಯುವುದಿಲ್ಲ. ದುಡಿಯುವ ಜನ ಸಾಮಾನ್ಯರಲ್ಲಿ ಕ್ರಾಂತಿ ಕಾರಕ ಜಾಗೃತಿ ಉಂಟಾಗಬೇಕು. ರಾಷ್ಟ್ರದಲ್ಲಿ ತನ್ನ ಆಲೋಚನೆ ಗಳು ಮತ್ತು ಯೋಜನೆಗಳು ಜಾರಿಗೆ ಬರಬೇಕೆಂದು ಬಯಸುವ ವಿಶ್ವದಲ್ಲಿನ ಯಾವುದೇ ಗುಂಪು, ಪಕ್ಷ ಅಥವಾ ವ್ಯಕ್ತಿ ಮೊದಲು ರಾಜ್ಯವನ್ನು ವಶಪಡಿಸಿಕೊಳ್ಳುತ್ತಾನೆ. ರಾಜ್ಯ ನಮ್ಮ ಕೈವಶವಾದಾಗ ನಾವು ಬದಲಾವಣೆಗೆ ಅಗತ್ಯವಾದ ಕಾನೂನುಗಳನ್ನು ಜಾರಿಗೆ ತರಬಹುದು... ಇದಕ್ಕೆ ವಿರೋಧ ಬಂದರೆ ರಾಜ್ಯದ ವಶದಲ್ಲಿರುವ ಪೋಲೀಸ್ ಮತ್ತು ಸೇನೆಯನ್ನು ಬಳಸಿ ಅದನ್ನು ಮಟ್ಟ ಹಾಕಬಹುದು.'

'ಜಯಪ್ರಕಾಶ್, ಅಧಿಕಾರವನ್ನು ನೀನು ಮತದಾನದ ಮೂಲಕ ಪಡೆಯಬಯಸುತ್ತೀಯೋ ಅಥವಾ ಹಿಂಸಾತ್ಮಕ ದಂಗೆಯ ಮೂಲಕವೋ?'

'ಸ್ವಾತಂತ್ರ್ಯ ಗಳಿಸಿದ ಮೇಲೆ ಹಿಂಸಾತ್ಮಕ ದಂಗೆಯ ಅಗತ್ಯವಿರಲಾರದು'

'ರಾಜ್ಯ ಎನ್ನುವುದು ಆತ್ಮವಿಲ್ಲದ ಒಂದು ಯಂತ್ರವಿದ್ದಂತೆ. ಜನ ಬೆಂಬಲವಿಲ್ಲದೆಯೇ ಅದಕ್ಕೆ ಕಾನೂನು ಚಲಾವಣೆಯ ಹಕ್ಕು ಹೇಗೆ ಬಂದೀತು? ಇಲ್ಲಿದೆ ನೋಡು, ನನ್ನ ಸತ್ಯಾಗ್ರಹದ ಒಳಾರ್ಥ. ಜನರ ಮನಸ್ಸನ್ನು ಕಾನೂನೊಂದರ ಮೂಲಕವೇ ಬದಲಿಸಲು ಸಾಧ್ಯವಿಲ್ಲ ಜಯಪ್ರಕಾಶ್. ಕಾನೂನು ಜಾರಿಯ ಮುಂಚೆ ಮನಃಪರಿವರ್ತನೆ ನಡೆಯಬೇಕು. ಉದಾಹರಣೆಗೆ ನೋಡು, ಇವೊತ್ತು ಸಾರ್ವಜನಿಕ ನೈರ್ಮಲ್ಯವನ್ನು ಕುರಿತ ಕಾನೂಗಳನ್ನು ಜಾರಿಗೆ ತರುವ ಅಧಿಕಾರ ನಮ್ಮವೇ ಜವಾಬ್ದಾರಿ ಸರ್ಕಾರಗಳಿಗಿವೆ.

ಆದರೆ ಈ ಆಧಿಕಾರವಿದ್ದೂ ಏನು ಪ್ರಯೋಜನ, ಜನರೇ ಸಿದ್ಧರಿಲ್ಲದಾಗ?'

'ಆಯಿತು, ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದ ಸದಸ್ಯರಾಗುವಂತೆ ನಾವು ಜನರ ಮನವೊಲಿಸುತ್ತೇವೆ. ಆ ಮೂಲಕ ಜನರ ಮನ ಮುಟ್ಟುತ್ತೇವೆ. ಆದರೆ ರಾಜ್ಯವನ್ನು ವಶಪಡಿಸಿಕೊಳ್ಳದೆ ಸಮಾಜವಾದವನ್ನು ಜಾರಿಗೆ ತರಲು ಈವರೆಗೆ ವಿಶ್ವದಲ್ಲಿ ಯಾರಿಗೂ ಸಾಧ್ಯವಾಗಿಲ್ಲ. ರಾಜ್ಯ ವಶದಲ್ಲಿದ್ದರೆ ಪಕ್ಷ ಈ ಭೂಮಿಯ ಮೇಲೆ ಸಮಾಜವಾದಿ ಸ್ವರ್ಗವನ್ನೇ ನಿರ್ಮಿಸಬಲ್ಲುದು.... ಸಮಾಜವಾದಿಯು ಅಸಮಾನತೆಯ ಬೇರುಗಳನ್ನೇ ಕಿತ್ತೆಸುವ ಪಣ ತೊಡುತ್ತಾನೆ. ಆದರೆ ನಿಮ್ಮ 'ಟ್ರಸ್ಟೀಷಿಪ್' ಪರಿಹಾರ ಮೊದಲಾಗಿ ಅಸಮಾನತೆ ಸಹಜ ಎಂದು ಒಪ್ಪಿಕೊಂಡು, ನಂತರ ಅದನ್ನು ಹೊಂದಾಣಿಕೆಯ ಮೂಲಕ ಒಂದಿಷ್ಟು ಕಡಿಮೆ ಮಾಡಲು ಪ್ರಯತ್ನಿಸುತ್ತದಷ್ಟೆ. ತಮ್ಮ ಸಂಪತ್ತನ್ನು ಬಿಟ್ಟುಕೊಡುವಂತೆ ಶ್ರೀಮಂತರನ್ನು ಮತ್ತು ಬೊಜ್ಜುಹೊಟ್ಟೆಯ ಬಂಡವಾಳದಾರರನ್ನು ನಾವೇಕೆ ಬಲಾತ್ಕರಿಸಬಾರದು? ಅವರು ಅಷ್ಟೆಲ್ಲಾ ಆಸ್ತಿಗಳಿಸಿರುವುದು ಶೋಷಣೆಯ ಮೂಲಕವೆಂದು ನೀವೂ ಒಪ್ಪಿಕೊಳ್ಳುತ್ತೀರಲ್ಲವೆ?'

'ನನ್ನದೂ ಕ್ರಾಂತಿಯೇ. ಅಲ್ಲದೆ ಅದು ನಿನ್ನ ರಷ್ಯಾದ ಕ್ರಾಂತಿಗಿಂತಲೂ ದೊಡ್ಡದು ಜಯಪ್ರಕಾಶ್. ಮನವೊಲಿಸುವಿಕೆಯ ಮೂಲಕ ನಾನು ಬಂಡವಾಳಗಾರನ ಹಣವನ್ನು ಮಾತ್ರವಲ್ಲ, ಆತನ ವ್ಯವಹಾರ ಚಾತುರ್ಯ, ಅನುಭವ ಸಂಪತ್ತು, ವಾಣಿಜ್ಯ ಜ್ಞಾನ ಮತ್ತು ಆತನ ವಿಶೇಷ ಕೌಶಲ್ಯಗಳನ್ನೂ ನನ್ನ ಕ್ರಾಂತಿಗಾಗಿ ಪಡೆದುಕೊಳ್ಳುತ್ತೇನೆ. ನನ್ನ ಅಹಿಂಸಾ ತತ್ವದ ಅಡಿಯಲ್ಲಿ ಉನ್ನತ ಆದರ್ಶಕ್ಕಾಗಿ ನಮ್ಮ ವಿರೋಧಿಯಿಂದ ಆತ್ಮಬಲಿಯನ್ನು ಕೂಡಾ ನಿರೀಕ್ಷಿಸಬಹುದು;ಅದಕ್ಕಾಗಿ ಅವನನ್ನು ಆಗ್ರಹಿಸಲೂಬಹುದು!'

ಆದರೆ ಇಂತಹ ಯಾವ ವಿವರಣೆಗೂ ಜೆಪಿ ಬಗ್ಗುವ ಸ್ಥಿತಿಯಲ್ಲಿರಲಿಲ್ಲ. ಅದಕ್ಕೆ ತನ್ನದೇ ಕಾಲ ಕೂಡಿ ಬರಬೇಕಿತ್ತು. ಅವರು ತಮ್ಮ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದ ಸಂಘಟನೆಯಲ್ಲಿ ಮುಳುಗಿದರು. ಆದರೆ ಜೆಪಿಯವರ ಈ ನಿಲುವು ಕಾಂಗ್ರೆಸ್‌ನೊಳಗಿನ ಸರ್ದಾರ್ ಪಟೇಲರ ನೇತೃತ್ವದ ಮುಕ್ತ ಉದ್ಯಮ ನೀತಿಯ ಬಲಪಂಥೀಯರ ಗುಂಪಿಗೆ ಕಿರಿ ಕಿರಿ ಉಂಟುಮಾಡತೊಡಗಿತ್ತು.

–೫–

ಕಮ್ಯೂನಿಸ್ಟರ ಐಕ್ಯರಂಗ

ಈ ಮಧ್ಯೆ ಈರೋಪ್‌ನಲ್ಲಿ ಫ್ಯಾಸಿಸಂ ತಲೆ ಎತ್ತಿದ ಪರಿಣಾಮವಾಗಿ ಅಂತಾರಾಷ್ಟ್ರೀಯ ಕಮ್ಯೂನಿಸ್ಟ್ ಸಂಸ್ಥೆ ತನ್ನ ಜಾಗತಿಕ ನೀತಿಯನ್ನು ಬದಲಾಯಿಸಿತು. ಕಮ್ಯೂನಿಸ್ಟರು ಆಯಾ ರಾಷ್ಟ್ರಗಳ ರಾಷ್ಟ್ರೀಯವಾದಿ ಚಳುವಳಿಗಳನ್ನು ವಿರೋಧಿಸು ವುದನ್ನು ನಿಲ್ಲಿಸಿ ಅವುಗಳೊಂದಿಗೆ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲಿ ಶಾಮೀಲಾಗಿ; ಆಯಾ ದೇಶಗಳಲ್ಲಿ ಕಮ್ಯೂನಿಸ್ಟ್ ಚಳುವಳಿಯನ್ನು ಬೆಳೆಸುವಂತೆ ಅದು ಕರೆ ಕೊಟ್ಟಿತು. ಇದರಿಂದಾಗಿ ಭಾರತದ ಕಮ್ಯೂನಿಸ್ಟರು ಕಾಂಗ್ರೆಸ್‌ನವರ ಸ್ನೇಹ ಸಂಪಾದಿಸಲು ಕಾಂಗ್ರೆಸ್ ಸೋಶಲಿಸ್ಟ್ ಪಕ್ಷವನ್ನು ಬಳಸಲು ನಿರ್ಧರಿಸಿದರು. ಲೆನಿನ್‌ರ ಮಾತುಗಳು ಈಗಲಾದರೂ ಕಮ್ಯೂನಿಸ್ಟರ ಗಮನಕ್ಕೆ ಬಂತಲ್ಲ ಎಂದು ಹರ್ಷಪಟ್ಟ ಜೆ.ಪಿ., ಅವರನ್ನು ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷಕ್ಕೆ ತುಂಬು ಹೃದಯ ದಿಂದ ಸ್ವಾಗತಿಸಿದರು. ಇದರ ಫಲವಾಗಿ, ದೀರ್ಘಕಾಲದ ಸಂಘಟನೆಯ ಬಲವಿದ್ದ ಭಾರತದ ಕಮ್ಯೂನಿಸ್ಟ್ ಪಕ್ಷ ಈ ಹೊಸ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದ ಆಯಕಟ್ಟಿನ ಜಾಗಗಳನ್ನು

ಆಕ್ರಮಿಸಿಕೊಳ್ಳಲು ಸಾಧ್ಯವಾಯಿತಲ್ಲದೆ, ಕಾಂಗ್ರೆಸ್ ಪಕ್ಷದೊಳ
ಗಡೆಯೂ ತನ್ನ ಬಲವನ್ನು ಸ್ಥಾಪಿಸಿಕೊಳ್ಳತೊಡಗಿತು. ಇವರು
ಜೆ.ಪಿ.ಯನ್ನು 'ಭಾರತದ ಲೆನಿನ್' ಎಂದು ಕರೆದು, 'ಭಾರತದ
ಕ್ರಾಂತಿ ಚಿರಾಯುವಾಗಲಿ' ಎಂದು ಘೋಷಣೆ ಕೂಗಿದರು. ಅ
ಮೂಲಕ ಕಾಂಗ್ರೆಸ್ಸಿನೊಳಗಿನ ಪಟೇಲ್ ಮುಂತಾದವರ ನೇತೃತ್ವದ
ಬಲಪಂಥೀಯ ಗುಂಪಿನ ಪ್ರಾಬಲ್ಯವನ್ನು ಅಡಗಿಸುವ ಜೆ.ಪಿ.
ಮತ್ತಿತರ ಗೆಳೆಯರ ಉದ್ದೇಶಕ್ಕೆ ಇಂಬು ನೀಡಿದರು.

ಈ ಬೆಳವಣಿಗೆಯ ಬಗ್ಗೆ ಕಾಂಗ್ರೆಸ್ ಸೋಶಲಿಸ್ಟ್
ಪಕ್ಷದೊಳಗೇ ವಿರೋಧ ಹೊಗೆಯಾಡುತ್ತಿತ್ತಾದರೂ, ಅದು
ಸ್ಫೋಟಗೊಂಡದ್ದು ೧೯೩೯ರ ತ್ರಿಪುರಾ ಕಾಂಗ್ರೆಸ್ ಅಧಿವೇಶನ
ದಲ್ಲಿ. ಕಾಂಗ್ರೆಸ್ ಅಧ್ಯಕ್ಷತೆಗೆ ಗಾಂಧೀಜಿ ಅಭ್ಯರ್ಥಿಯಾಗಿದ್ದ
ಪಟ್ಟಾಭಿ ಸೀತಾರಾಮಯ್ಯನವರು ಸೋತು, ಸುಭಾಷ್‌ಚಂದ್ರ
ಬೋಸ್ ಗೆದ್ದಾಗ. ಗಾಂಧೀಜಿಗೆ ಆದ ಈ ಮುಖಭಂಗದಿಂದಾಗಿ,
ಇದು ಹೇಗೆ ಸಾಧ್ಯವಾಯಿತೆಂದು ತನಿಖೆ ಮಾಡಿ ನೋಡಿದಾಗ
ಗೊತ್ತಾದದ್ದು, ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದ ಮೂಲಕ ಕಾಂಗ್ರೆಸ್
ಪಕ್ಷದೊಳಗೆ ನುಸುಳಿದ್ದ ಕಮ್ಯೂನಿಸ್ಟರು, ಗಾಂಧಿ ನಾಯಕತ್ವವನ್ನು
ಘಾಸಿಗೊಳಿಸಲು ಒಂದು ಸಂಘಟಿತ ಗುಂಪಾಗಿ ಕೆಲಸ ಮಾಡಿ
ಇಡಿಯಾಗಿ ಸುಭಾಷರ ಪರ ಮತಹಾಕಿದ್ದರು. ಈ ಆಘಾತವನ್ನು
ಗಾಂಧೀಜಿ ತಮ್ಮದೇ ರಾಜಕೀಯ ಕೌಶಲ್ಯದ ಮೂಲಕ ಮೆಟ್ಟಿ
ನಿಂತರಾದರೂ, ಕಮ್ಯೂನಿಸ್ಟರ ತಂತ್ರದ ಬಗ್ಗೆ ಮೊದಲಿನಿಂದಲೂ
ಅನುಮಾನಪಟ್ಟಿದ್ದ ಕಾಂಗ್ರೆಸ್ ಸೋಶಲಿಸ್ಟರ ಗುಂಪು
ಕಮ್ಯೂನಿಸ್ಟರ ಗುಂಪಿನ ಗುಪ್ತ ಚಟುವಟಿಕೆಗಳ ಜಾಲವನ್ನು
ಭೇದಿಸುವ ಪ್ರಯತ್ನ ಮಾಡಿದರು. ಆಗ ಕಮ್ಯೂನಿಸ್ಟರು ಕಾಂಗ್ರೆಸ್
ನಾಯಕತ್ವವನ್ನು ಮಾತ್ರವಲ್ಲದೆ, ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದ
ನಾಯಕತ್ವನ್ನು ಹೀಗಳೆಯುತ್ತಾ, ಈ ಎರಡೂ ಪಕ್ಷಗಳನ್ನು ತಮ್ಮದ

ನ್ನಾಗಿ ಮಾಡಿಕೊಳ್ಳುವ ಒಂದು ದೊಡ್ಡ 'ಯೋಜನೆ'ಯನ್ನೇ ರೂಪಿಸಿದ್ದ ದಾಖಲೆಗಳು ದೊರೆತವು. ಇದರಿಂದ ಹೆಚ್ಚು ಘಾಸಿಗೊಂಡವರೆಂದರೆ ಜೆ.ಪಿ.ಯವರೇ. ತಮ್ಮ ಪಕ್ಷದ ೧೯೩೯ರ ರಾಮಘಡ ಅಧಿವೇಶನದಲ್ಲಿ ಅವರು ಕಮ್ಯೂನಿಸ್ಟರನ್ನು ವಿಶ್ವಾಸ ದ್ರೋಹಿಗಳೆಂದೂ, ಸೋಶಲಿಸ್ಟ್ ಪಕ್ಷದ ಪರಮಶತ್ರುಗಳೆಂದೂ ಘೋಷಿಸಿದರು. ಅವರೆಲ್ಲರನ್ನೂ ಪಕ್ಷದಿಂದ ಹೊರಹಾಕುವ ನಿರ್ಣಯವನ್ನು ತಾವೇ ಮಂಡಿಸಿದರು.

ಕಮ್ಯೂನಿಸಂ ಬಗೆಗೆ ಪುನರಾಲೋಚನೆ

ಈ ಹೊತ್ತಿಗೆ ಎರಡನೇ ಮಹಾಯುದ್ಧ ಆರಂಭವಾಗಿತ್ತು. ಇದರಲ್ಲಿ ಬ್ರಿಟನ್ ಕೂಡಾ ಭಾಗವಹಿಸಬೇಕಾಗಿ ಬಂದುದರಿಂದ, ಅದು ತನ್ನ ವಸಾಹತುವಾಗಿದ್ದ ಭಾರತವನ್ನು ಈ ಯುದ್ಧಕ್ಕೆ ಎಳೆಯುವ ಪ್ರಯತ್ನ ಮಾಡಿತು. ಈ ಪ್ರಯತ್ನದ ಭಾಗವಾಗಿ, ಭಾರತದ ಸೈನಿಕ ತುಕಡಿಗಳನ್ನು ಬ್ರಿಟನ್ ಪರ ಹೋರಾಡಲು ಕಳಿಸುವ ಮತ್ತು ಪ್ರಾಂತೀಯ ಸರ್ಕಾರಗಳ ಕೆಲವು ಅಧಿಕಾರಗಳನ್ನು ಮೊಟಕುಗೊಳಿಸುವ ಕ್ರಮವನ್ನು ಕೈಗೊಳ್ಳಲು ಬ್ರಿಟಿಷ್ ಸರ್ಕಾರ ಮುಂದಾಯಿತು. ಇದಕ್ಕೆ ಕಾಂಗ್ರೆಸ್‌ನಿಂದ ವ್ಯಾಪಕ ಪ್ರತಿಭಟನೆ ವ್ಯಕ್ತವಾಯಿತು. ಹಾಗೇ, ಭಾರತ ಯುದ್ಧದಲ್ಲಿ ಬ್ರಿಟಿಷ್ ಸರ್ಕಾರದೊಂದಿಗೆ ಸಹಕರಿಸಬೇಕೇ ಬೇಡವೇ ಎಂಬ ಬಗ್ಗೆ ಕಾಂಗ್ರೆಸ್‌ನಲ್ಲಿ ಭಿನ್ನಾಭಿಪ್ರಾಯಗಳು ವ್ಯಕ್ತವಾದವು. ಕಾಂಗ್ರೆಸ್ ಸೋಶಲಿಸ್ಟರು ಬ್ರಿಟಿಷ್ ಸರ್ಕಾರವನ್ನು ಬೆಂಬಲಿಸದೆ ಅದರ ಮೇಲೆ ಒತ್ತಡ ಹೇರುವ ಮೂಲಕ ಪೂರ್ಣ ಸ್ವಾತಂತ್ರ್ಯ ಪಡೆಯುವ ಸದವಕಾಶವಿದೆಯೆಂದು ತೀರ್ಮಾನಿಸಿ ಯುದ್ಧ ವಿರೋಧಿ ಆಂದೋಲನ ಆರಂಭಿಸಿದರು. ಇದರ ಭಾಗವಾಗಿ ಜೆ.ಪಿ. ಜೆಮ್‌ಶೆಡ್‌ಪುರದಲ್ಲಿ ಉಕ್ಕಿನ ಕಾರ್ಖಾನೆಯ ಕಾರ್ಮಿಕರನ್ನು ಉದ್ದೇಶಿಸಿ ಯುದ್ಧಕ್ಕೆ ಬಳಸುವ ಉಕ್ಕಿನ ಉತ್ಪಾದನೆಯನ್ನು

ನಿಲ್ಲಿಸುವಂತೆ ಮಾಡಿದ ಭಾಷಣದಿಂದಾಗಿ ಅವರನ್ನು ಬಂಧಿಸಲಾಯಿತು.

ಒಂಭತ್ತು ತಿಂಗಳ ಈ ಸೆರೆಮನೆವಾಸ ಅವರ ಬದುಕಿನಲ್ಲಿ ಒಂದು ದೊಡ್ಡ ವೈಚಾರಿಕ ತಿರುವಿಗೆ ಕಾರಣವಾಯಿತು. ಸ್ಟಾಲಿನ್ ಯುಗ ಮುಗಿದಿತ್ತು. ಸೋವಿಯತ್ ಒಕ್ಕೂಟದಿಂದ ಕಮ್ಯೂನಿಸ್ಟ್ ಬರ್ಬರತೆಯ ಸುದ್ದಿಗಳು ಬರತೊಡಗಿದ್ದವು. ಈ ಸಂಬಂಧ ಸೆರೆಮನೆಯಲ್ಲಿ ಅವರು ಅನೇಕ ಹೊಸ ಪುಸ್ತಕಗಳನ್ನು ಓದಿದರು. ವಿಶೇಷವಾಗಿ ಅರ್ಥರ್ ಕೊಸ್ಲೆರ್‌ನ 'ಡಾರ್ಕ್‌ನೆಸ್ ಅಟ್ ನೂನ್' ಎಂಬ ಪುಸ್ತಕ ಅವರ ತಾತ್ವಿಕ ಬುಡವನ್ನೇ ಅಲ್ಲಾಡಿಸಿತು. ಪ್ರಜಾಸತ್ತಾತ್ಮಕ ಸ್ವಾತಂತ್ರ್ಯಗಳು ಇಲ್ಲದೆಡೆ ಸಮಾಜವಾದ ಇರಲಾರದು ಮತ್ತು ಇದ್ದರೂ ಅಲ್ಲಿ ಉಸಿರಾಡುವ ಗಾಳಿ, ತಿನ್ನುವ ಅನ್ನ ಮತ್ತು ಮಾಡುವ ಸ್ನೇಹ ಜೀವದಾಯಿಯಾಗಿರಲಾರದು ಎಂದು ಅವರಿಗೆ ಅನ್ನಿಸತೊಡಗಿತು. ಮಾರ್ಕ್ಸ್‌ವಾದಿ-ಲೆನಿನ್‌ವಾದಿ ದೃಷ್ಟಿಕೋನದ ಬಗ್ಗೆ ಅವರಲ್ಲಿ ಪುನರಾಲೋಚನೆ ಆರಂಭವಾಯಿತು.

-೬-

ಯುದ್ಧ ವಿರೋಧಿ ಆಂದೋಲನದಲ್ಲಿ

ಈ ಬಂಧನದಿಂದ ಬಿಡುಗಡೆಯಾದ ನಂತರದಲ್ಲೇ ಮತ್ತೆ ಅವರು ಭೂಗತರಾಗಿ ಯುದ್ಧವಿರೋಧಿ ಆಂದೋಲನದಲ್ಲಿ ಮತ್ತೆ ತೊಡಗಿಕೊಂಡರು. ಈ ಹೊತ್ತಿಗಾಗಲೇ ಜೆಪಿಯವರನ್ನು ಬ್ರಿಟಿಷ್ ಸರ್ಕಾರ 'ಅತ್ಯಂತ ಅಪಾಯಕಾರಿ ಶಕ್ತಿ' ಎಂದು ಗುರುತಿಸಿ ಅವರ ಚಲನ ವಲನಗಳ ಕಡೆ ವಿಶೇಷ ಗಮನ ಹರಿಸಿತ್ತು. ಹೀಗಾಗಿ ಇವರ ವಿಧ್ವಂಸಕ ಕೃತ್ಯಗಳ ಜಾಡುಹಿಡಿದ ಬ್ರಿಟಿಷ್ ಸರ್ಕಾರ ಇವರನ್ನು ಮುಂಬೈನಲ್ಲಿ ಬಂಧಿಸಿ ಅತ್ಯಂತ ಕುಪ್ರಸಿದ್ಧ ಸೆರೆಮನೆ

ಎನಿಸಿದ್ದ ರಾಜಸ್ಥಾನದ ದೇವಲಿ ಶಿಬಿರಕ್ಕೆ ಕಳಿಸಲಾಯಿತು. ಮೂರನೇ ದರ್ಜೆ ಅಪರಾಧಿಗಳಿಗೆ ಮೀಸಲಾದ ಈ ಮರುಭೂಮಿ ಮಧ್ಯದ ಗುಡಾರಗಳನ್ನೊಳಗೊಂಡ ಈ 'ಸೆರೆಮನೆ'ಯಲ್ಲಿ ಬಂಧಿತರಿಗೆ ಸರಿಯಾದ ಅನ್ನಾಹಾರ ನೀಡದೆ, ವೈದ್ಯಕೀಯ ಸೌಲಭ್ಯಗಳಿಲ್ಲದೆ ಕ್ರೂರವಾಗಿ ನೋಡಿಕೊಳ್ಳಲಾಗುತ್ತಿತ್ತು. ಆದರೂ ಜೆ.ಪಿ., ಅಲ್ಲಿಂದಲೇ ತಮ್ಮನ್ನು ಕಾಣಲು ಬಂದವರ ಮೂಲಕ ಕಳ್ಳತನದಲ್ಲಿ ಪತ್ರಗಳನ್ನು ಕಳಿಸಿ, ಹೊರಗೆ ಬ್ರಿಟಿಷ್ ವಿರೋಧಿ ವಿಧ್ವಂಸಕ ಕೃತ್ಯಗಳನ್ನು ಆಯೋಜಿಸುತ್ತಿದ್ದರು. ಒಮ್ಮೆ ತಮ್ಮನ್ನು ಕಾಣಲು ಬಂದ ಪತ್ನಿ ಪ್ರಭಾವತಿಯವರ ಮೂಲಕವೇ ಇಂತಹ ಸಂದೇಶ ವೊಂದನ್ನು ಸಾಗಿಸಲು ಯತ್ನಿಸುತ್ತಿರುವಾಗ ಸಿಕ್ಕಿಹಾಕಿಕೊಂಡರು.

ಈ ಸಂದೇಶ ವಿಧ್ವಂಸಕ ಕೃತ್ಯಗಳಿಗೆ ಕೊಟ್ಟ ಕರೆಯಾದುದರಿಂದ ಬ್ರಿಟಿಷ್ ಸರ್ಕಾರ, ವಿದ್ಯಾವಂತರೂ, ಬುದ್ಧಿವಂತರೂ ಆದ ಜೆ.ಪಿ.ಯವರನ್ನು ಅಂತಹ ಶಿಬಿರದಲ್ಲಿ ಬಂದಿಯಾಗಿಡಬಾರದೆಂಬ ಗಾಂಧಿಯವರ ಸಲಹೆಯನ್ನು ತಿರಸ್ಕರಿಸಿತು. ಬದಲಿಗೆ, ಕಾಂಗ್ರೆಸ್ ಹೇಗೆ ಒಂದು ಹಿಂಸಾತ್ಮಕ ಆಂದೋಲನವಾಗುತ್ತಿದೆ ಎಂದು ಪ್ರಚಾರ ಮಾಡಿತು. ಗಾಂಧಿ, ಈ ಹಿಂಸಾಚಾರಕ್ಕೆ ಬ್ರಿಟಿಷ್ ಸರ್ಕಾರದ ದಮನ ನೀತಿಯೇ ಕಾರಣವೆಂದು ಉತ್ತರಿಸಿ, ಜೆ.ಪಿ.ಯವರನ್ನು ಬಿಡುಗಡೆ ಮಾಡಲು ಆಗ್ರಹಿಸಿದರು. ಈ ಮಧ್ಯೆ ಜೆ.ಪಿ. ಗಾಂಧಿಮಾರ್ಗ ಬಳಸಿ, ಶಿಬಿರದಲ್ಲಿನ ಸ್ಥಿತಿಗತಿಗಳ ವಿರುದ್ಧ ೩೧ ದಿನಗಳ ಕಾಲ ಉಪವಾಸ ಕೂತರು. ಕೊನೆಗೆ ಬ್ರಿಟಿಷ್ ಸರ್ಕಾರ ಮಣಿದು ಅವರನ್ನು ಅವರದೇ ರಾಜ್ಯವಾದ ಬಿಹಾರದ ಹಜ಼ಾರಿಬಾಗ್ ಸೆರೆಮನೆಗೆ ಸ್ಥಳಾಂತರಿಸಿತು.

ಈ ಮಧ್ಯೆ ಯುದ್ಧ, ಭಾರತದ ಬಾಗಿಲಿಗೇ ಬರುವಂತಾದಾಗ–ಜಪಾನೀ ಸೇನೆ ಬರ್ಮಾ ಗಡಿ ಮುಟ್ಟಿದಾಗ–

ಕಾಂಗ್ರೆಸ್ ತನ್ನೆಲ್ಲ ಭಿನ್ನಾಭಿಪ್ರಾಯಗಳನ್ನು ಮರೆತು ೧೯೪೨ರ ಆಗಸ್ಟ್ ೮ರಂದು ಬ್ರಿಟಿಷರಿಗೆ 'ಭಾರತ ಬಿಟ್ಟು ತೊಲಗಿ' ಎಂದು ಆಜ್ಞಾಪಿಸುವ ನಿರ್ಣಯವನ್ನು ಅಂಗೀಕರಿಸಿತು. ಈ ಸಂಬಂಧ ಗಾಂಧೀಜಿ ಮುಂಬೈನಲ್ಲಿ ಮಾಡಿದ ಭಾವನಾತ್ಮಕ ಭಾಷಣದಲ್ಲಿ, ಜನರನ್ನು 'ಮಾಡಿ ಇಲ್ಲವೇ ಮಡಿಯಿರಿ' ಎಂದು ನೀಡಿದ ಕರೆಯಿಂದ ದೇಶಾದ್ಯಂತ ವಿದ್ಯುತ್ ಸಂಚಾರವಾದಂತಾಗಿ, ಜನ ಬ್ರಿಟಿಷ್ ಸರ್ಕಾರದ ವಿರುದ್ಧ ಬಹಿರಂಗವಾಗಿ ದಂಗೆಯೆದ್ದರು. ಅವರಿಗೆ ಮಾರ್ಗ ತೋರಲು ಯಾರೂ ಇಲ್ಲದಂತೆ ಸರ್ಕಾರ ಗಾಂಧೀಜಿ ಸೇರಿದಂತೆ ಎಲ್ಲ ಕಾಂಗ್ರೆಸ್ ನಾಯಕರನ್ನು ಬಂಧಿಸಿದ್ದರಿಂದಾಗಿ, ಜನ ರೊಚ್ಚಿನಿಂದ ಬ್ರಿಟಿಷ್ ಸರ್ಕಾರದ ಆಸ್ತಿ ಪಾಸ್ತಿಗಳನ್ನು ನಾಶಮಾಡತೊಡಗಿದರು. ಸರ್ಕಾರಿ ಕಚೇರಿಗಳಿಗೆ ಬೆಂಕಿ, ರೈಲ್ವೇ ನಿಲ್ದಾಣಗಳಿಗೆ ಮುತ್ತಿಗೆ, ಟೆಲಿಫೋನ್, ಟೆಲಿಗ್ರಾಫ್ ತಂತಿಗೆ ಕತ್ತರಿ, ಸೇತುವೆಗಳ ಸ್ಫೋಟ ದಿನನಿತ್ಯದ ಘಟನೆಗಳಾದವು. ಕಾಂಗ್ರೆಸ್ ಸೋಶಲಿಸ್ಟ್ ನಾಯಕರೆಲ್ಲ ಭೂಗತವಾಗಿ ಈ ವಿಧ್ವಂಸಕ ಕೃತ್ಯಗಳನ್ನು ಆಯೋಜಿಸಿ ಪ್ರೋತ್ಸಾಹಿಸುತ್ತಿದ್ದರು. ಲೋಹಿಯಾ ಮತ್ತವರ ಗೆಳೆಯರು ಒಂದು ಸಂಚಾರಿ ರೇಡಿಯೋ ಕೇಂದ್ರವನ್ನು ಸ್ಥಾಪಿಸಿ ಆ ಮೂಲಕ ಯುದ್ಧವಿರೋಧಿ ಕಾರ್ಯಾಚರಣೆಗೆ ಪ್ರಚೋದನೆ ನೀಡುತ್ತಾ ಬ್ರಿಟಿಷ್ ಸರ್ಕಾರಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಿದ್ದರು.

ಸೆರೆಮನೆಯಿಂದ ಸೆರೆಮನೆಗೆ!

ಹೀಗೆ ಬ್ರಿಟಿಷ್ ವಿರೋಧಿ ಚಳುವಳಿ ಕಾವೇರುತ್ತಿದ್ದಂತೆ ಜೆ.ಪಿ.ಯವರಿಗೆ ಸೆರೆಮನೆಯಲ್ಲಿ ಉಳಿಯುವುದು ಅಸಾಧ್ಯವೆನಿಸಿತು. ಅವರು ೧೯೪೨ರ ನವೆಂಬರ್ ೮ರಂದು ತಮ್ಮ ಸಹ ಬಂದಿಗಳ ಜೊತೆ ಸೇರಿ ಕಾವಲುಗಾರರಿಗೆ ಚಳ್ಳೆಹಣ್ಣು ತಿನ್ನಿಸಿ ಸೆರೆಮನೆಯ ಗೋಡೆ ಹಾರಿ ಹಗಲೂ ರಾತ್ರಿ ಕಾಡಿನಲ್ಲಿ ನಡೆದು

ಬಿಹಾರ ಗಡಿದಾಟಿ ನೇಪಾಳವನ್ನು ಪ್ರವೇಶಿಸಿದರು. ಆ ಗಡಿ ಪ್ರದೇಶದಲ್ಲಿ ಅಜ್ಞಾತವಾಗಿ ನೆಲೆ ನಿಂತು 'ಆಜ಼ಾದ್ ದಾಸ್ತಾ' ಎಂಬ ಸ್ವಯಂ ಸೇವಕರ ಪಡೆಯೊಂದನ್ನು ಸಿದ್ಧಗೊಳಿಸಿ ಅಲ್ಲಿ ಒಂದು ಸಮಾನಾಂತರ ಸರ್ಕಾರವನ್ನೇ ಸ್ಥಾಪಿಸಿದರು. ಆ ಹೊತ್ತಿಗೆ ಅಲ್ಲಿಗೆ ಪೋಲೀಸ್ ಕಣ್ತಪ್ಪಿಸುತ್ತಾ ಲೋಹಿಯಾ ಮತ್ತಿತರ ಗೆಳೆಯರು ಬಂದು ಸೇರಿದರು. ಮತ್ತೆ ಪೋಲೀಸರು ಇವರ ಬೆನ್ನು ಹತ್ತಿದ ಪರಿಣಾಮವಾಗಿ ಗುಂಪು ಚೆಲ್ಲಾಪಿಲ್ಲಿಯಾಯಿತು. ಜೆ.ಪಿ. ಮಾರು ವೇಷದಲ್ಲಿ ದೆಹಲಿ ತಲುಪಿದರು. ಅಲ್ಲಿಂದ ಬಲೂಚಿಸ್ತಾನದ ಪಠಾಣರನ್ನು ದಂಗೆಯೇಳಿಸಲು ಪಠಾಣರ ವೇಷದಲ್ಲಿ ರಾವಲ್ಪಿಂಡಿಗೆ ರೈಲಲ್ಲಿ ಹೊರಟಿದ್ದಾಗ ಅವರನ್ನು ಬಂಧಿಸಿ ಹತ್ತಿರದ ಲಾಹೋರ್ ಕೋಟೆಯ ಸೆರೆಮನೆಗೆ ದೂಡಲಾಯಿತು. ಅಲ್ಲಿಗೆ ಆ ಹೊತ್ತಿಗಾಗಲೇ ಮುಂಬೈನಲ್ಲಿ ಸಿಕ್ಕಿ ಬಿದ್ದಿದ್ದ ಲೋಹಿಯಾರನ್ನು ಕರೆತರಲಾಗಿತ್ತು.

ಲಾಹೋರ್ ಸೆರೆಮನೆಯಲ್ಲಿ ಜೆ.ಪಿ ಮತ್ತು ಲೋಹಿಯಾರ ವಿಚಾರಣೆ ಆರಂಭವಾಯಿತು. ಕೈಕಾಲುಗಳಿಗೆ ಬೇಡಿ ಹಾಕಿ ಕತ್ತಲೆ ಕೋಣೆಯಲ್ಲಿ ಅವರನ್ನು ಕೂಡಿಹಾಕಲಾಯಿತು. ಇಬ್ಬರನ್ನೂ ಹಲವು ರೀತಿಯ ಮೂರನೇ ದರ್ಜೆ ಶಿಕ್ಷೆಗೆ ಒಳಪಡಿಸಿ ಅವರಿಂದ ವಿಧ್ವಂಸಕ ಕೃತ್ಯಗಳ ವಿವರಗಳನ್ನೂ, ತಪ್ಪೊಪ್ಪಿಗೆಯನ್ನೂ ಪಡೆಯಲು ಪ್ರಯತ್ನಿಸಲಾಯಿತು. ಮಂಜಿನ ಗಡ್ಡೆಯ ಮೇಲೆ ತಾಸುಗಟ್ಟಲೆ ಮಲಗಿಸಲಾಯಿತು, ಕೈಕಾಲುಗಳಿಗೆ ಸರಪಳಿ ಹಾಕಿ ಕಲ್ಲುನೆಲದ ಮೇಲೆ ಎಳೆದಾಡಲಾಯಿತು, ದಿನಗಟ್ಟಲೆ ನಿದ್ದೆ ಮಾಡಲು ಬಿಡದೆ ಅವರ ಬುದ್ಧಿ ಭ್ರಮಣೆಗೆ ಪ್ರಯತ್ನಿಸಲಾಯಿತು. ಜೆ.ಪಿ. ಮತ್ತು ಲೋಹಿಯಾ ಬಾಯಿ ಬಿಡಲಿಲ್ಲ. ಆದರೆ ಸೆರೆಮನೆಯಿಂದ ಅನಾರೋಗ್ಯದ ಕಾರಣದ ಮೇಲೆ ಬಿಡುಗಡೆಗೊಂಡಿದ್ದ ಗಾಂಧೀಜಿ, ಸಮಾಜವಾದಿಗಳ ನೇತೃತ್ವದಲ್ಲಿ

ನಡೆಯುತ್ತಿದ್ದ ಹಿಂಸಾಚಾರವನ್ನು ಖಂಡಿಸಿ ಹೇಳಿಕೆ ನೀಡಿದಾಗ ಜೆಪಿ ವಿಚಲಿತರಾದರು. ಅಷ್ಟೇ ಅಲ್ಲ, ಆನಂತರ ಬ್ರಿಟಿಷ್ ಭಾರತದ ಮೇಲೆ ಜಪಾನೀ ಸೇನೆಯ ಒತ್ತಡ ಹೆಚ್ಚಿದಂತೆಲ್ಲ ರಾಷ್ಟ್ರದಲ್ಲಿ ವಾತಾವರಣ ಬಿಗುವಾಡತೊಡಗಿತು. ಇದರ ಫಲವಾಗಿ ಸರ್ಕಾರ ಇತರ ನಾಯಕರನ್ನು ಒಬ್ಬರಾದ ಮೇಲೆ ಒಬ್ಬರಂತೆ ಬಿಡುಗಡೆಗೊಳಿಸಬೇಕಾಗಿ ಬಂದಾಗ, ಹೀಗೆ ಬಿಡುಗಡೆಗೊಂಡ ನಾಯಕರು ಸರ್ಕಾರದೊಂದಿಗೆ ಸ್ವಾತಂತ್ರ್ಯಕ್ಕಾಗಿ 'ಚೌಕಾಶಿ' ಮಾತುಕತೆಗೆ ಮುಂದಾಗಿದ್ದನ್ನು ಕಂಡು ಜೆಪಿ ಕ್ರುದ್ಧರಾದರು.

ಆದರೆ ಅಂತಿಮವಾಗಿ ಯುದ್ಧದಲ್ಲಿ ಬ್ರಿಟನ್ ಮತ್ತು ಅದರ ಗೆಳೆಯ ರಾಷ್ಟ್ರಗಳು ಜಯಗಳಿಸಿದವು. ಭಾರತಕ್ಕೆ ಸ್ವಾತಂತ್ರ್ಯ ನೀಡಲು ಅಡ್ಡಗಾಲು ಹಾಕಿದ್ದ ಬ್ರಿಟಿಷ್ ಪ್ರಧಾನಿ ಚರ್ಚಿಲ್ ಯುದ್ಧಾನಂತರದ ಚುನಾವಣೆಗಳಲ್ಲಿ ಸೋತಿದ್ದರು. ಭಾರತಕ್ಕೆ ಸ್ವಾತಂತ್ರ್ಯ ನೀಡುವುದರ ಪರವಾಗಿದ್ದ ಅಟ್ಲೀ ನೇತೃತ್ವದ ಲೇಬರ್ ಸರ್ಕಾರ ಅಧಿಕಾರಕ್ಕೆ ಬಂದಿತ್ತು. ಅದು ತನ್ನ ಗೆಳೆಯ ರಾಷ್ಟ್ರಗಳ ಒತ್ತಡಕ್ಕೆ ಮಣಿದು, ತ್ವರಿತ ಗತಿಯಲ್ಲಿ ಭಾರತದಿಂದ ಬ್ರಿಟಿಷ್ ಸರ್ಕಾರ ಕಾಲ್ತೆಗೆಯಲು ಅನುವಾಗುವಂತಹ ವ್ಯವಸ್ಥೆ ರೂಪಿಸಲು, ಕ್ರಿಪ್ಸ್ ನೇತೃತ್ವದ ನಿಯೋಗವೊಂದನ್ನು ಕಳಿಸಲು ತೀರ್ಮಾನಿಸಿತ್ತು. ಈ ಹಿನ್ನೆಲೆಯಲ್ಲಿ ಜೆಪಿ, ಲೋಹಿಯಾ ಇತ್ಯಾದಿ ನಾಯಕರ ಬೇಷರತ್ ಬಿಡುಗಡೆಗಾಗಿ ಗಾಂಧೀಜಿ ಆಗ್ರಹಿಸಿದರು. ಇತರ ಅನೇಕ ಹೋರಾಟಗಾರರೊಂದಿಗೆ ೧೯೪೬ರ ಏಪ್ರಿಲ್ ೧೧ ರಂದು ಜೆ.ಪಿ. ಮತ್ತು ಲೋಹಿಯಾರ ಬಿಡುಗಡೆ ಮಾಡಲಾಯಿತು. ಅವರಿಗೆ ದೇಶಾದ್ಯಂತ ವೀರೋಚಿತ ಸ್ವಾಗತ ದೊರಕಿತು. ಆ ಹೊತ್ತಿಗೆ ತಮ್ಮ ಮಿತ್ರ ಮೀನೂ ಮಸಾನಿ ಸೋವಿಯತ್ ಪ್ರವಾಸ ಮಾಡಿಬಂದು ಬರೆದಿದ್ದ ಅನುಭವ ಕಥನವೊಂದು, ಸೆರೆಮನೆಯಲ್ಲಿ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಓದಿದ ಇತರ

ಪುಸ್ತಕಗಳ ಜೊತೆ ಸೇರಿ ಜೆ.ಪಿ.ಯವರಲ್ಲಿ ಕಮ್ಯೂನಿಸ್ಟ್ ಪ್ರಭುತ್ವದ ಸ್ವರೂಪದ ಬಗ್ಗೆಯೇ ಅನುಮಾನಗಳು ಆರಂಭವಾಗಿದ್ದವು. ಜೆಪಿಯವರ ಹಳೆಯ ತಾತ್ವಿಕ ಪೊರೆ ಕಳಚಿಕೊಳ್ಳತೊಡಗಿತ್ತು.

ಕಾಂಗ್ರೆಸ್ಸಿನೊಂದಿಗೆ ಭಿನ್ನಮತ

ಆದರೆ ಕಾಂಗ್ರೆಸ್ ಸೋಶಲಿಸ್ಟರು ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದ ಮಾತುಕತೆಗಳಲ್ಲಿ ಭಾಗವಹಿಸಲು ನಿರಾಕರಿಸಿದರು. ಈ ಅಧಿಕಾರ ಹಸ್ತಾಂತರದ ವ್ಯವಸ್ಥೆ ರೂಪಿಸುವ ಕ್ರಮವೂ ಅವರಿಗೆ ಬ್ರಿಟಿಷ್ ಸರ್ಕಾರದ ಕಾಲಹರಣ ತಂತ್ರವಾಗಿ ಕಂಡಿತು. ಅವರು ಬ್ರಿಟಿಷರು ಕೂಡಲೇ ಭಾರತದಿಂದ ಕಾಲ್ತೆಗೆಯಬೇಕು; ನಂತರದ ವ್ಯವಸ್ಥೆಯನ್ನು ತಾವು ಮಾಡಿಕೊಳ್ಳುವಾ ಎಂಬ ನಿಲುವನ್ನು ತಾಳಿದ್ದರು. ಜೊತೆಗೆ ಮಹಮ್ಮದಾಲಿ ಜಿನ್ನಾರ ಪಾಕಿಸ್ತಾನದ ಕೂಗು ಬ್ರಿಟಿಷರ ಕುತಂತ್ರವಾಗಿಯೇ ಕಂಡು, ಪರಿಸ್ಥಿತಿಯನ್ನು ಇನ್ನಷ್ಟು ಜಟಿಲಗೊಳಿಸಿತ್ತು. ಇದರ ಮಧ್ಯೆಯೇ ಸ್ವಾತಂತ್ರ್ಯ ಘೋಷಣೆಗಾಗಿ ಅವಸರಿಸುತ್ತಿದ್ದ ನೆಹರೂ, ಪಟೇಲ್ ಮತ್ತು ರಾಜಾಜಿಯವರಂತಹ ಕಾಂಗ್ರೆಸ್ಸಿಗರ ಒತ್ತಡಕ್ಕೆ ಮಣಿಯದೆ ಗಾಂಧೀಜಿ ಐದು ವರ್ಷಗಳ ಕಾಲ ನಾಗರಿಕ ಸತ್ಯಾಗ್ರಹ ಮತ್ತು ರಚನಾತ್ಮಕ ಕಾರ್ಯಕ್ರಮಗಳಲ್ಲಿ ತೊಡಗುವ ಮೂಲಕ ಜನಜಾಗೃತಿಯ ಕೆಲಸ ಮಾಡಬೇಕೆಂಬುದು ಜೆಪಿಯವರ ಆಶಯವಾಗಿತ್ತು. ಅದರ ಫಲವಾಗಿ ರಾಷ್ಟ್ರ ವಿಭಜನೆಯ ಕೂಗು ತಣ್ಣಗಾಗಿ, ಕಾಂಗ್ರೆಸ್ ಪಟ್ಟಭದ್ರ ಆಸಕ್ತಿಗಳಿಂದ ಮುಕ್ತವಾಗಿ ಅಧಿಕಾರ ಹಸ್ತಾಂತರಕ್ಕೆ ಸೂಕ್ತ ವಾತಾವರಣ ನಿರ್ಮಾಣ ವಾಗುತ್ತದೆಂದು ಅವರು ಭಾವಿಸಿದರು. ಆದರೆ ಸಂವಿಧಾನ ರಚನಾ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಸಮಾಜವಾದಿಗಳು ತಮ್ಮ ಕನಸುಗಳನ್ನು ನನಸು ಮಾಡುವಂತಹ

ಸೂಕ್ತ ವೇದಿಕೆ ನಿರ್ಮಾಣ ಮಾಡಿಕೊಳ್ಳಬಹುದೆಂದು ಗಾಂಧೀಜಿ ಸೂಚಿಸಿದರು.

ಗಾಂಧೀಜಿ ಎಷ್ಟೇ ತಿಳಿ ಹೇಳಿದರೂ ಜೆ.ಪಿ. ಮತ್ತವರ ಸೋಶಲಿಸ್ಟ್ ಗೆಳೆಯರು ಮಧ್ಯಂತರ ಸರ್ಕಾರ, ಸಂವಿಧಾನ ರಚನಾ ಸಭೆ ಇತ್ಯಾದಿ ಸ್ವಾತಂತ್ರ್ಯದೆಡೆಯ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ನಿರಾಕರಿಸಿದರು. ಅವರು ಈ ಸಂಬಂಧದ ಕಾಂಗ್ರೆಸ್ಸಿನ ತೀರ್ಮಾನಗಳಲ್ಲೂ ಜವಾಬ್ದಾರಿ ಸ್ಥಾನಗಳಲ್ಲಿದ್ದು ಭಾಗವಹಿಸಲು, ಕಾಂಗ್ರೆಸ್ಸಿನ ಹಿರಿಯ ನಾಯಕರು ಒಪ್ಪದಂತಹ ಷರತ್ತುಗಳನ್ನು ಹಾಕಿದರು. ಅವರಿಗೆ ಈ ಎಲ್ಲ ಪ್ರಕ್ರಿಯೆ, ಔಪಚಾರಿಕತೆಗಳ ಮೂಲಕ ಅಧಿಕಾರ ಬ್ರಿಟಿಷರಿಂದ ಭಾರತದ ಪಟ್ಟಭದ್ರ ಹಿತಾಸಕ್ತಿಗಳಿಗಷ್ಟೇ ವರ್ಗಾವಣೆಯಾಗುತ್ತದೆ ಎಂಬ ಆತಂಕವಿತ್ತು. ಈ ಆತಂಕವನ್ನು ನಿವಾರಿಸಲು ಗಾಂಧಿ, ಜೆ.ಪಿ. ಯವರನ್ನು ಮತ್ತು ಆನಂತರ ಆಚಾರ್ಯ ನರೇಂದ್ರದೇವರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡಲು ಪ್ರಯತ್ನಪಟ್ಟರಾದರೂ, ನೆಹರೂ–ಪಟೇಲ್ ಗುಂಪು ಅದನ್ನು ನಯವಾಗಿ ತಡೆಯಿತು.

ಕಾಂಗ್ರೆಸ್‌ನಿಂದ ಹೊರಕ್ಕೆ

೧೯೪೭ರ ಆಗಸ್ಟ್ ೧೫ರಂದು ಬ್ರಿಟಿಷರು ಭಾರತವನ್ನು ಬಿಟ್ಟುಹೋದರು. ಸ್ವಾತಂತ್ರ್ಯ ಘೋಷಣೆಯೂ ಆಯಿತು. ನೆಹರೂ ಪ್ರಧಾನಮಂತ್ರಿಯಾದರು. ಆದರೆ ಅದರ ಜೊತೆಯಲ್ಲೇ ದೇಶವಿಭಜನೆಯ ಅನಾಹುತದ ನೆತ್ತರು ದೇಶಾದ್ಯಂತ ಹರಿಯಿತು. ಬಂಗಾಳದಲ್ಲಿನ ಹಿಂದೂಗಳ ಮಾರಣಹೋಮಕ್ಕೆ ಪ್ರತಿಯಾಗಿ ಬಿಹಾರದಲ್ಲಿ ಮುಸ್ಲಿಮರ ಮಾರಣಹೋಮ ಆರಂಭವಾದಾಗ ಜೆ.ಪಿ. ಅಲ್ಲಿಗೆ ತೆರಳಿ, ಅದನ್ನು ತಡೆಯಲಾಗದ ಕಾಂಗ್ರೆಸ್ ಸರ್ಕಾರಕ್ಕೆ ಛೀಮಾರಿ ಹಾಕಿದರು. ಮುಸ್ಲಿಮರಲ್ಲಿ ಆತ್ಮವಿಶ್ವಾಸ ತುಂಬಿದರು. ಇದೇ ಹೊತ್ತಿನಲ್ಲಿ ನೆಹರೂ ಸರ್ಕಾರದ ಆಡಳಿತ

ಶೈಲಿ ಮತ್ತು ಅಭಿವೃದ್ಧಿ ನೀತಿಯನ್ನು ಕಂಡು ವಿಚಲಿತರಾದ ಗಾಂಧೀಜಿ, ಇವುಗಳನ್ನು ಸರಿ ದಾರಿಗೆ ತರುವ ದಿಕ್ಕಿನ ಪ್ರಯತ್ನವಾಗಿ ಕಾಂಗ್ರೆಸ್ ಸೋಶಲಿಸ್ಟರೊಂದಿಗೆ ಮಾತುಕತೆ ಆರಂಭಿಸಿದ್ದರು. ಆದರೆ ಈ ಸಂದರ್ಭದಲ್ಲಿ ದಟ್ಟವಾಗಿ ಹರಡಿದ್ದ ರುದ್ರ ಭಯಂಕರ ಕೋಮುಗಲಭೆಯ ಉದ್ವಿಗ್ನತೆಯಲ್ಲಿ ಗಾಂಧೀಜಿ ೧೯೪೮ರ ಜನವರಿ ೩೦ರಂದು ಕೊಲೆಯಾದರು. ಜೆ.ಪಿ. ಸೇರಿದಂತೆ ಕಾಂಗ್ರೆಸ್ ಸೋಶಲಿಸ್ಟರೆಲ್ಲ ದಿಗ್ಭ್ರಾಂತರಾದರು. ತಂದೆಯನ್ನು ಕಳೆದುಕೊಂಡಂತೆ ಅನಾಥರಾದರು. ಜೆ.ಪಿ. ಯವರಂತೂ, ಗೃಹ ಮಂತ್ರಿಯಾಗಿ ಗಾಂಧೀಜಿ ಜೀವವನ್ನು ಕಾಪಾಡುವ ಹೊಣೆ ಹೊತ್ತಿದ್ದ ಪಟೇಲರ ಮೇಲೆ ಅದಕ್ಷತೆ ಮತ್ತು ಕರ್ತವ್ಯ ನಿರ್ಲಕ್ಷ್ಯ ಆರೋಪ ಹೊರಿಸಿ ಹರಿ ಹಾಯ್ದರು. ಪಟೇಲರು ಕೆಲವೇ ದಿನಗಳಲ್ಲಿ ಕಾಂಗ್ರೆಸ್ ಸಂವಿಧಾನಕ್ಕೆ ಒಂದು ತಿದ್ದುಪಡಿ ಮಾಡಿಸಿ, ಕಾಂಗ್ರೆಸ್ ಸೋಶಲಿಸ್ಟರು ಕಾಂಗ್ರೆಸ್‌ನಿಂದ ಇಡಿಯಾಗಿ ಹೊರಹೋಗುವಂತೆ ನೋಡಿಕೊಳ್ಳುವ ಮೂಲಕ ಅವರಿಗೆ ಉತ್ತರಿಸಿದರು.

-೭-

ಸಮಾಜವಾದಿ ಪಕ್ಷದ ಉದಯ

ಹೀಗೆ ಕಾಂಗ್ರೆಸ್‌ನಿಂದ ಸ್ವತಂತ್ರವಾದ ಸೋಶಲಿಸ್ಟರು ತಮ್ಮದೇ ಭಾರತದ ಸಮಾಜವಾದಿ ಪಕ್ಷ ಸ್ಥಾಪಿಸಿಕೊಂಡು, ೧೯೫೨ರ ಮೊದಲ ಮಹಾಚುನಾವಣೆಗಳನ್ನು ಎದುರಿಸಿದರು. ಕಾಂಗ್ರೆಸ್ಸಿಗರಿಗೆ ಹೋಲಿಸಿದಂತೆ ಯಾವುದೇ ಚುನಾವಣಾ ಅನುಭವ ಅಥವಾ ಸಂಪನ್ಮೂಲಗಳಿಲ್ಲದ ಸಮಾಜವಾದಿಗಳು, ಸಂಘಟನೆಯ ಬಲವೂ ಇಲ್ಲದೆ ಭಾರೀ ಸೋಲನ್ನು ಅನುಭವಿಸಿ ಕಂಗಾಲಾದರು. ಇದಕ್ಕೆ ಕೆಲವರು ಚುನಾವಣೆಯ ನಿರ್ವಹಣೆಯ

ಹೊಣೆ ಹೊತ್ತಿದ್ದ ಜೆಪಿಯವರನ್ನೇ ಜವಾಬ್ದಾರರನ್ನಾಗಿ ಮಾಡಿ ಅವರ ಮನ ನೋಯಿಸಿದರು. ಆನಂತರ ಪಕ್ಷ, ನೆಹರೂ ಸರ್ಕಾರದ ವೈಖರಿಯಿಂದ ಬೇಸರಗೊಂಡ ಆಚಾರ್ಯ ಕೃಪಲಾನಿಯವರಂತಹ ಇನ್ನಷ್ಟು ಎಡಪಂಥೀಯ ಗಾಂಧೀವಾದಿ ಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡು 'ಪ್ರಜಾ ಸಮಾಜವಾದಿ ಪಕ್ಷ' ಎನ್ನಿಸಿಕೊಂಡಿತು. ಈ ಮಧ್ಯೆ ಲೋಹಿಯಾ ಚುನಾವಣಾ ಸೋಲಿನ ನಂತರದ ಪಕ್ಷದ ಪಂಚಮಡಿ ಅಧಿವೇಶನದಲ್ಲಿ ಪಕ್ಷಕ್ಕೆ ಮಾರ್ಕ್ಸ್‌ವಾದಕ್ಕಿಂತ ಭಿನ್ನವಾದ ಗಾಂಧಿ ತತ್ವಗಳಿಂದ ಪ್ರಭಾವಿತ ವಾದ ಹೊಸ ಭಾರತೀಯ ಸಮಾಜವಾದದ ದೀಕ್ಷೆ ನೀಡಿದ್ದರು. ಜೆ.ಪಿ. ಇದನ್ನು ಇಡಿಯಾಗಿ ಒಪ್ಪಿಕೊಂಡಾಗ, ಪಕ್ಷದಲ್ಲಿದ್ದ ಮಾರ್ಕ್ಸ್‌ವಾದಿಗಳು ದಿಗ್ಭ್ರಮೆಗೊಂಡು ಪ್ರತಿಭಟಿಸಿದರು. ಆದರೆ ಈ ಹೊತ್ತಿಗಾಗಲೇ ತಾತ್ವಿಕ ಪುನರಾಲೋಚನೆಗೆ ತಮ್ಮನ್ನು ಗಂಭೀರ ವಾಗಿ ಒಡ್ಡಿಕೊಂಡಿದ್ದ ಜೆಪಿ, ಅವರನ್ನೆಲ್ಲ ಸ್ಟಾಲಿನ್ ನಂತರ ಮಾರ್ಕ್ಸ್‌ವಾದವನ್ನು ನೋಡಬೇಕಾದ ಬಗೆಯನ್ನೂ, ಅದರಲ್ಲಿ ವಹಿಸಬೇಕಾದ ಎಚ್ಚರಗಳನ್ನೂ, ಸ್ಥಳೀಯ ಅಗತ್ಯಗಳಿಗೆ ತಕ್ಕಂತೆ ಮಾಡಿಕೊಳ್ಳಬೇಕಾದ ಬದಲಾವಣೆಗಳನ್ನೂ ವಿವರಿಸುವ ಮೂಲಕ ಸಮಾಧಾನ ಪಡಿಸಿದರು.

ಭೌತವಾದಕ್ಕೆ ತಿಲಾಂಜಲಿ

ಗಾಂಧೀಜಿಯ ಸಾವು ಉಂಟುಮಾಡಿದ ಭಾವನಾತ್ಮಕ ಶೂನ್ಯತೆ ಮತ್ತು ತಾವು ಬಲವಾಗಿ ನಂಬಿದ್ದ ತಾತ್ವಿಕತೆ ಪಡೆದುಕೊಳ್ಳಲಾರಂಭಿಸಿದ್ದ ವಕ್ರತೆಗಳಿಂದ ಜೆ.ಪಿ. ಜರ್ಝರಿತ ರಾಗಿದ್ದರು. ಅವರು ಸಂಪೂರ್ಣ ಬದಲಾಗತೊಡಗಿದ್ದರು. ಸಮಾಜವಾದಿ ಪಕ್ಷದ ವತಿಯಿಂದ ತಾವು ನಡೆಸುತ್ತಿದ್ದ ಕಾರ್ಮಿಕ ಸಂಘಟನೆಯ ಚಟುವಟಿಕೆಗಳಿಗೆ ತಮ್ಮ ಹಳೆಯ ಸ್ನೇಹಿತ ನೆಹರೂ ಅವರ ಸರ್ಕಾರವೇ ಒಡ್ಡುತ್ತಿದ್ದ ಅಡ್ಡಿ-ಆತಂಕಗಳ ರೀತಿ ನೀತಿಗಳು

ಅವರಲ್ಲಿ ಪಕ್ಷ ರಾಜಕಾರಣದ ಕಾರ್ಯಶೀಲತೆಯ ಬಗೆಗೇ ಅನುಮಾನಗಳನ್ನು ಹುಟ್ಟಿಸತೊಡಗಿದ್ದವು. ಈ ಮಧ್ಯೆ, ತಮ್ಮನ್ನು ನಂಬಿದ್ದ ಕಾರ್ಮಿಕ ಸಂಘವೊಂದಕ್ಕೆ ನೀಡಿದ್ದ ವಾಗ್ದಾನವನ್ನು ಸರ್ಕಾರದ ವಚನಭಂಗದಿಂದಾಗಿ ಈಡೇರಿಸಲಾಗದ್ದಕ್ಕೆ ಅವರಿಗೆ ಬಹು ಪರಿತಾಪ ಉಂಟಾಯಿತು. ಅವರು ಇದ್ದಕ್ಕಿದ್ದಂತೆ ಪಶ್ಚಾತ್ತಾಪ ಕ್ರಮವಾಗಿ ಏಳು ವಾರಗಳ ಉಪವಾಸ ಕೈಗೊಳ್ಳಲು ತೀರ್ಮಾನಿಸಿ ಎಲ್ಲರನ್ನೂ ದಂಗುಬಡಿಸಿದರು. ಗಾಂಧಿ ಬದುಕಿರುವವರೆಗೂ ಅವರ ಮಾರ್ಗವನ್ನು ವಿರೋಧಿಸುತ್ತಲೇ ಬಂದ ಮನುಷ್ಯ ಅವರ ಸಾವಿನ ನಂತರ, ಅದರಿಂದಲೇ ಆಘಾತಗೊಂಡಂತೆ ಅವರ ಮಾರ್ಗದಲ್ಲಿ ಹೀಗೆ ಹೆಜ್ಜೆ ಇಡತೊಡಗುವರೆಂದು ಯಾರೂ ಊಹಿಸಿರಲಾರರು! ಈ ಉಪವಾಸದ ಸಂದರ್ಭದಲ್ಲಿ ಅವರು ತಮ್ಮ ಈವರೆಗಿನ ಚಿಂತನೆ ಮತ್ತು ಅನುಭವಗಳನ್ನೆಲ್ಲ ಸಮಗ್ರವಾಗಿ ಹಿನ್ನೋಡಿ, ಮಾರ್ಕ್ಸ್‌ವಾದದ ಗತಿ ತಾರ್ಕಿಕತೆಯಲ್ಲಿ ಮನುಷ್ಯನ ಒಳ್ಳೆಯತನದ ಕಲ್ಪನೆಗೇ ಅವಕಾಶವಿಲ್ಲ ಎಂದು ತೀರ್ಮಾನಿಸಿ, ತಾವು ಈವರೆಗೆ ನಂಬಿಕೊಂಡು ಬಂದು ಹಲವಾರು ಬಾರಿ ಪುನರಾಲೋಚನೆಗೊಡ್ಡಿದ್ದ ಭೌತವಾದಕ್ಕೆ ತಿಲಾಂಜಲಿ ನೀಡಿದರು. ಅದನ್ನು ಅವರು ವಿವರಿಸಿದ್ದು ಹೀಗೆ:

'ಬಹಳ ವರ್ಷಗಳಿಂದ ನಾನು ಗತಿ ತಾರ್ಕಿಕ ಭೌತವಾದವನ್ನು ದೇವತೆಯಂತೆ ಪೂಜಿಸಿಕೊಂಡು ಬಂದಿದ್ದೆ. ಇದು ನನಗೆ ಮತ್ತಾವುದೇ ತತ್ವಶಾಸ್ತ್ರಕ್ಕಿಂತ ಹೆಚ್ಚು ತೃಪ್ತಿ ನೀಡುತ್ತಿದ್ದಂತೆ ಅನಿಸಿತ್ತು. ತತ್ವಶಾಸ್ತ್ರೀಯ ಶೋಧನೆಗಳು ಈಗಲೂ ಮನುಷ್ಯನನ್ನು ಅತೃಪ್ತನನ್ನಾಗಿಯೇ ಉಳಿಸಿವೆಯಾದರೂ, ಯಾವುದೇ ರೀತಿಯ ಭೌತವಾದವೂ ಮನುಷ್ಯ ನಿಜವಾದ ಅರ್ಥದಲ್ಲಿ ಮಾನವೀಯವಾಗುವ ಅವಕಾಶಗಳನ್ನೇ ಕಸಿದು

ಕೊಂಡುಬಿಡುತ್ತದೆಂದು ನನಗೀಗ ಸ್ಪಷ್ಟವಾಗಿ ಮನವರಿಕೆಯಾಗಿದೆ. ಭೌತವಾದಿ ನಾಗರೀಕತೆಯಲ್ಲಿ ಮನುಷ್ಯನಿಗೆ ತಾನು ಒಳ್ಳೆಯವನಾಗಿರಲು ಯಾವುದೇ ಪ್ರೇರಕ ಶಕ್ತಿ ಇರುವುದಿಲ್ಲ... ಗತಿತಾರ್ಕಿಕ ಭೌತವಾದದ ಸಾಮ್ರಾಜ್ಯದಲ್ಲಿ ಭಯ, ಮನುಷ್ಯನನ್ನು ಸಂಪೂರ್ಣವಾಗಿ ವಿಧೇಯನನ್ನಾಗಿಸುತ್ತದೆ ಮತ್ತು ಪಕ್ಷ ದೇವರ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತದೆ. ಆದರೆ ಈ ದೇವರೇ ದುಷ್ಟನಾದಾಗ, ದುಷ್ಟತನವೇ ಸಾಮಾನ್ಯ ನೀತಿ ಸಂಹಿತೆಯಾಗಿಬಿಡುತ್ತದೆ!'

ನಂತರದ ದಿನಗಳಲ್ಲಿ ನೆಹರೂ ಕಾಂಗ್ರೆಸ್‌ನಲ್ಲಿ ಒಂಟಿಯಾಗಿ, ತಮ್ಮ ವಿರೋಧಿಗಳನ್ನು ಮಣಿಸುವ ರಾಜಕಾರಣದ ಭಾಗವಾಗಿ ೧೯೫೫ರ ಆವಡಿ ಅಧಿವೇಶನದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸಮಾಜವಾದದ ದೀಕ್ಷೆ ನೀಡಿ, ಸಮಾಜವಾದಿಗಳನ್ನು ಸರ್ಕಾರದಲ್ಲಿ ಭಾಗವಹಿಸಲು ಆಹ್ವಾನಿಸಿದರು. ಜೆ.ಪಿ. ಅದಕ್ಕೆ ಪ್ರತಿಸ್ಪಂದಿಸಿ ಕಾಂಗ್ರೆಸ್ ನಾಯಕರೊಂದಿಗೆ ಮಾತುಕತೆಗೆ ತೊಡಗಿದರು. ಇದು ಒಂದು ಸಮಾಜವಾದಿ ಆಂದೋಲನವನ್ನು ಕಟ್ಟುವ ಪಕ್ಷದ ಬದ್ಧತೆಗೆ ಮಾಡಲಾಗುತ್ತಿರುವ ಅನ್ಯಾಯ ಎಂದು ಸಿಟ್ಟಾದ ಲೋಹಿಯಾ ಮತ್ತು ಅವರ ಬೆಂಬಲಿಗರು ಜೆ.ಪಿ. ವಿರುದ್ಧ ಕಿಡಿ ಕಾರಿದರು. ಆದರೆ ಜೆ.ಪಿ. ಮಂಡಿಸಿದ ಷರತ್ತುಗಳಿಗೆ ಕಾಂಗ್ರೆಸ್ ಒಪ್ಪದೇ ಹೋಗಿ ಮಾತುಕತೆ ಮುರಿದು ಬಿದ್ದಾಗ ಜೆ.ಪಿ. ಒಂಟಿಯಾಗಿ ಹೋದರು. ಅವರ ಪಾಲಿಗೆ ಮೊದಲು ಗಾಂಧಿ, ನಂತರ ಹಿರಿಯ ಮಾರ್ಗದರ್ಶಕ ಆಚಾರ್ಯ ನರೇಂದ್ರದೇವ ಅವರ ಸಾವು, ನಂತರ ಆಪ್ತ ಗೆಳೆಯ ಲೋಹಿಯಾರ ದೂರಾಗುವಿಕೆ ಅವರನ್ನು ಖಿನ್ನರನ್ನಾಗಿ ಮಾಡಿತು. ಸಮಾಜವಾದಿ ಪಕ್ಷದ ನೇತೃತ್ವದ ಸರ್ಕಾರವಿದ್ದ ತಿರುವಾಂಕೂರು ರಾಜ್ಯದಲ್ಲಿ ನಡೆದ ಜನರ ಮೇಲಿನ ಗೋಲಿಬಾರನ್ನು ಖಂಡಿಸಿ ಲೋಹಿಯಾ ಸರ್ಕಾರದ ರಾಜೀನಾಮೆಗಾಗಿ ಆಗ್ರಹಿಸುವುದರೊಂದಿಗೆ

ಸಮಾಜವಾದಿ ಪಕ್ಷದಲ್ಲಿ ಉಂಟಾದ ಭಿನ್ನಭಿಪ್ರಾಯಗಳು, ಅಶಾಂತಿ ಮತ್ತು ಒಳಜಗಳಗಳು ಜೆ.ಪಿ.ಯವರನ್ನು ಕಂಗೆಡಿಸಿ, ಅವರು ನಿಧಾನವಾಗಿ ಪಕ್ಷ ರಾಜಕೀಯವನ್ನೇ ತೊರೆಯಲು ನಿರ್ಧರಿಸುವಂತೆ ಮಾಡಿತು. ಅವರ ಗಮನ ಗಾಂಧೀಜಿ ಪ್ರತಿಪಾದಿಸಿದ್ದ ರಚನಾತ್ಮಕ ಕಾರ್ಯಕ್ರಮದ ಕಲ್ಪನೆಯ ಕಡೆ ಹರಿಯಿತು.

ಪಕ್ಷ ರಾಜಕಾರಣಕ್ಕೆ ವಿದಾಯ

ಗಾಂಧೀಜಿಯ ಅಧ್ಯಾತ್ಮಿಕ ವಾರಸುದಾರರೆಂದೇ ಪ್ರಸಿದ್ಧರಾದ ವಿನೊಬಾ ಭಾವೆಯವರು ಈ ರಚನಾತ್ಮಕ ಕಾರ್ಯಕ್ರಮವನ್ನು ಸರ್ವೋದಯ ಚಳುವಳಿಯ ಹೆಸರಲ್ಲಿ ಮುಂದುವರೆಸಿದ್ದರು. ಜೆಪಿ ೧೯೫೪ರಲ್ಲಿ ಬುದ್ಧಗಯಾದಲ್ಲಿ ನಡೆದ ವಿನೋಬಾ ಭಾವೆ ನೇತೃತ್ವದ 'ಸರ್ವೋದಯ' ಸಮ್ಮೇಳನದಲ್ಲಿ ಭಾಗವಹಿಸಿದರು. 'ಭೂದಾನ' ಚಳುವಳಿ ಅವರನ್ನು ಆಕರ್ಷಿಸಿತು. ಗಾಂಧಿ ರೂಪಿಸಿದ್ದ ಅಹಿಂಸಾತ್ಮಕ ಮನಃಪರಿವರ್ತನೆಯನ್ನಾಧರಿಸಿದ ಸಾರ್ವತ್ರಿಕ ಸರಳ ಜೀವನ ಮಾದರಿಯನ್ನು ಕಟ್ಟಬಯಸುವ ಸರ್ವೋದಯ ಮಾರ್ಗವೇ ಪಕ್ಷ ರಾಜಕಾರಣದ ಮಾರ್ಗಕ್ಕಿಂತ ಉತ್ತಮವೆಂದು ಅವರು ಭಾವಿಸಿದರು., ೧೯೫೭ರಲ್ಲಿ 'ಪ್ರಜಾ ಸಮಾಜವಾದಿ ಪಕ್ಷ'ವನ್ನು ತೊರೆದು ವಿನೋಬಾ ಶಿಷ್ಯರಾಗಿ ಪರಿವರ್ತಿತರಾದರು; ಸರ್ವೋದಯ ಚಳುವಳಿಗೆ ತಮ್ಮನ್ನು ಪೂರ್ಣವಾಗಿ ಸಮರ್ಪಿಸಿಕೊಂಡರು. ತಮ್ಮನ್ನು ತಾವು 'ಜೀವನ ದಾನಿ' ಎಂದು ಘೋಷಿಸಿಕೊಂಡರು. ತಮ್ಮ ಸಾರ್ವಜನಿಕ ಬದುಕಿನ ಈ ದೊಡ್ಡ ತಿರುವನ್ನು ಅವರು ತಮ್ಮ 'ಸಮಾಜವಾದದಿಂದ ಸರ್ವೋದಯಕ್ಕೆ' ಎಂಬೊಂದು ಲೇಖನದಲ್ಲಿ ವಿವರಿಸಿಕೊಂಡಿರುವುದು ಹೀಗೆ:

'ನಾನು ಪಕ್ಷ ಮತ್ತು ಪಕ್ಷ ರಾಜಕಾರಣವನ್ನು ತೊರೆಯಲು

ನಿರ್ಧರಿಸಿದ್ದು ಯಾವುದೇ ತೆರನ ಜಿಗುಪ್ಸೆ ಅಥವಾ ವೈಯುಕ್ತಿಕ ಹತಾಶೆಯಿಂದಲ್ಲ. ಬದಲಿಗೆ, ಸಮಾನತೆ, ಸ್ವಾತಂತ್ರ್ಯ, ಸೋದರತೆ, ಶಾಂತಿ ಇತ್ಯಾದಿ ನಮ್ಮ ಚಿರಂತನ ಗುರಿಗಳನ್ನು ಇಂತಹ ರಾಜಕಾರಣದ ಮೂಲಕ ತಲುಪಲಾಗುವುದಿಲ್ಲ ಎಂದು ನನಗೆ ಸ್ಪಷ್ಟವಾಗತೊಡಗಿದುದರಿಂದ.... ಸರ್ವೋದಯದ ರಾಜಕಾರಣಕ್ಕೆ ಪಕ್ಷದ ಮತ್ತು ಅಧಿಕಾರದ ಗೊಡವೆ ಇರುವುದಿಲ್ಲ. ಹಾಗೆ ನೋಡಿದರೆ ಅದರ ಗುರಿಯೇ ಎಲ್ಲ ಅಧಿಕಾರ ಕೇಂದ್ರಗಳನ್ನು ನಾಶ ಮಾಡುವುದೇ ಆಗಿದೆ. ಇಂತಹ ಹೊಸ ರಾಜಕಾರಣ ಬೆಳೆದಷ್ಟೂ, ಆ ಹಳೆಯ ರಾಜಕಾರಣ ಕುಗ್ಗುತ್ತಾ ಹೋಗುತ್ತದೆ. ರಾಜ್ಯತ್ವ ನಶಿಸಿ ಹೋಗುವ ಪ್ರಕ್ರಿಯೆ ಎಂದರೆ ಇದೇ'

ಸರ್ವೋದಯ ಚಳುವಳಿಯ ಅಂಗವಾಗಿ ಅವರು ದೇಶದ ವ್ಯಾಪಕ ಪ್ರವಾಸ ಮಾಡಿದರು. ವಿಶೇಷವಾಗಿ ಬಿಹಾರದಲ್ಲಿ ಭೂದಾನವನ್ನು ಒಂದು ದೊಡ್ಡ ಚಳುವಳಿಯಾಗಿ ರೂಪಿಸಿದರು. ಇದಕ್ಕೆ ಪೂರಕವಾಗಿ ಸಖೋದೇವೂರಾ ಎಂಬಲ್ಲಿ ಸರ್ವೋದಯ ಆಶ್ರಮವೊಂದನ್ನು ತೆರೆದು, ಅಲ್ಲಿ ಜನಸಂಪರ್ಕ, ಸಂಶೋಧನೆ ಮತ್ತು ಗ್ರಾಮ ಕೈಗಾರಿಕೆಗಳನ್ನಾಧರಿಸಿದ ಹೊಸಜೀವನ ಮಾದರಿಯೊಂದನ್ನು ವಿಕಾಸಗೊಳಿಸುವ ಪ್ರಯೋಗಕ್ಕೆ ಕೈಹಾಕಿದರು. ಬಿಹಾರದಾದ್ಯಂತ ಎಲ್ಲ ಹಂತಗಳಲ್ಲಿ ಜನ ಸಂಘಟನೆಯ ಮೂಲಕ ಮತ್ತು ಸರ್ಕಾರದ ಪಂಚಾಯತ್ ರಾಜ್ ಇಲಾಖೆಯ ಸಹಯೋಗದೊಂದಿಗೆ ಗಾಂಧೀಜಿ ಕಲ್ಪನೆಯ 'ಗ್ರಾಮ ಸ್ವರಾಜ್ಯ'ದ ಆಧಾರಗಳನ್ನು ನಿರ್ಮಿಸುವ ಪ್ರಯತ್ನ ಮಾಡಿದರು. ಇದರ ಜೊತೆಗೇ, ಮುಂದಿನ ಹತ್ತು ವರ್ಷಗಳ ಕಾಲ ಅವರು ಟಿಬೆಟ್ ಮತ್ತು ಭಾರತದ ಮೇಲಿನ ಚೀನಾ ಆಕ್ರಮಣ, ಪಾಕಿಸ್ತಾನದೊಡನೆ ಯುದ್ಧ, ಕಾಶ್ಮೀರ ಸಮಸ್ಯೆ, ಬಾಂಗ್ಲಾ ಸಮಸ್ಯೆ, ಬಿಹಾರದ ಭೀಕರ ಕ್ಷಾಮ, ನಕ್ಸಲ್ ಸಮಸ್ಯೆ, ನಾಗಾ ಬಂಡುಕೋರರ ಸಮಸ್ಯೆ

ಗಳಂತಹ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಎದುರಿಸುವಲ್ಲಿ ಸರ್ಕಾರದೊಡನೆ ಕೈಜೋಡಿಸಿ ಕೆಲಸ ಮಾಡಿದರು.

ಲೋಕನಾಯಕ

ಆದರೆ ಸರ್ಕಾರ ಹಾದಿ ತಪ್ಪಿದಾಗ ಅದನ್ನು ತರಾಟೆಗೆ ತೆಗೆದುಕೊಳ್ಳುವುದೂ ತಮ್ಮ ಕರ್ತವ್ಯವೆಂದು ಅವರು ಭಾವಿಸಿದರು. ಹಾಗಾಗಿ ಚೀನಾದ ಟಿಬೆಟ್ ನೀತಿಗೆ ಸಂಬಂಧಿಸಿದಂತೆ ತಮ್ಮ ಹಳೆಯ ಗೆಳೆಯ ನೆಹರೂ ನೇತೃತ್ವದ ಭಾರತ ಸರ್ಕಾರಕ್ಕೆ ಛೀಮಾರಿ ಹಾಕಲೂ ಅವರು ಹಿಂಜರಿಯಲಿಲ್ಲ. ಚೀನಾದ ಟಿಬೆಟ್ ಆಕ್ರಮಣವನ್ನು ಭಾರತ ಖಂಡಿಸಬೇಕೆಂದು ಅವರು ಬಯಸಿದರು. ಅಷ್ಟೇ ಅಲ್ಲ ಬಂಡವಾಳಶಾಹಿ ಮತ್ತು ಕಮ್ಯೂನಿಸ್ಟ್ ಜಗತ್ತುಗಳಿಗೆ ಪರ್ಯಾಯವಾಗಿ ನೆಹರೂ ಸಂಘಟಿಸಿದ್ದ ಅಲಿಪ್ತ ಜಗತ್ತಿನ ನೀತಿ ಜಡವಾಗಿದೆ ಎಂದು ಖಂಡಿಸಿ 'ಸಕ್ರಿಯ ನಾಲ್ಕನೇ ಜಗತ್ತಿ'ನ ಪರಿಕಲ್ಪನೆಯೊಂದನ್ನು ಅವರು ಮಂಡಿಸಿದರು. ಬಿಹಾರದ ಸಮಸ್ಯೆಗಳ ಪರಿಹಾರಕ್ಕೆ ರೂಪಿಸಿದಂತಹ ಶಾಂತಿ ಸೇನೆಯೊಂದನ್ನು ಜಾಗತಿಕ ಸೋದರತ್ವ ಸ್ಥಾಪನೆಗಾಗಿ ಕೂಡಾ ರೂಪಿಸಲು ಅವರು ಯತ್ನಿಸಿದರು. ಈ ಸಂಬಂಧ ಅವರು ವಿದೇಶಗಳಿಗೆ ಅತಿಥಿಯಾಗಿ ಹೋಗಿಬಂದರು. ಆಫ್ರಿಕದಲ್ಲಿ ಮುಂದುವರೆದಿದ್ದ ಪಶ್ಚಿಮದ ವಸಾಹತುಗಳ ವಿಮೋಚನೆಗಾಗಿ ಶಾಂತಿ ಮೆರವಣಿಗೆಗಳನ್ನು ಆಯೋಜಿಸಿದರು. ಇಷ್ಟೆಲ್ಲಾ ಸಾಧನೆ ಮಾಡಿ ರಾಷ್ಟ್ರದ ಗಮನ–ಗೌರವ ಸಂಪಾದಿಸಿದ್ದರಿಂದಾಗಿಯೇ ೧೯೭೧ರಲ್ಲಿ ಚಂಬಲ್ ಕಣಿವೆಯ ಢಕಾಯಿತರು ಸರ್ಕಾರಕ್ಕೆ ಶರಣಾಗಲು ಇವರನ್ನು ಹುಡುಕಿಕೊಂಡು ಬರುವಂತಾದದ್ದು. ಇದರಲ್ಲಿ ಯಶಸ್ವಿಯಾದ ಜೆ.ಪಿ. ಮುಂದೆ ರಾಷ್ಟ್ರಾದ್ಯಂತ 'ಲೋಕನಾಯಕ'ರೆಂದೇ ಜನಪ್ರಿಯರಾದರು.

ಮತ್ತೆ ಹೋರಾಟಕ್ಕೆ

ಇಷ್ಟು ಹೊತ್ತಿಗೆ ಜೆ.ಪಿ. ಪತ್ನಿಯನ್ನು ಕಳೆದುಕೊಂಡಿದ್ದರು
ಅವರಿಗೆ ಮಧುಮೇಹ ಬಾಧಿಸ ತೊಡಗಿತ್ತು. ಕ್ರಮೇಣ
ಸರ್ವೋದಯ ಚಳುವಳಿ ಒಂದು ವ್ಯವಸ್ಥೆಯಾಗಿ ಜಡ್ಡುಗಟ್ಟ
ತೊಡಗಿದೆಂದು ಅವರಿಗೆ ಅನ್ನಿಸತೊಡಗಿತ್ತು. ಹೊರಗ
ರಾಜಕಾರಣ ರೂಕ್ಷವಾಗತೊಡಗಿತ್ತು. ಜೆ.ಪಿ. ಯಾವ ಪಕ್ಷ
ರಾಜಕಾರಣದ ಜವಾಬ್ದಾರಿಯನ್ನು ಯಾರಿಗೆ ಬಿಟ್ಟು
ಬಂದಿದ್ದರೋ ಆ ಲೋಹಿಯಾ ಅಕಾಲಿಕ ಮರಣಕ್ಕೆ
ತುತ್ತಾಗಿದ್ದರು. ಎಪ್ಪತ್ತರ ದಶಕದ ಆರಂಭದ ಹೊತ್ತಿಗೆ ಕಾಂಗ್ರೆಸ
ಪಕ್ಷ ವಿಭಜನೆಗೊಂಡು ನೆಹರೂರ ಮಗಳು ಇಂದಿರಾಗಾಂಧಿ
ಪಕ್ಷದಲ್ಲಿ ತಮ್ಮ ನಾಯಕತ್ವವನ್ನು ಭದ್ರಪಡಿಸಿಕೊಳ್ಳಲು ಪಕ್ಷದ
ಪ್ರಜಾಸತ್ತಾತ್ಮಕ ಶೀಲವನ್ನೇ ನಾಶಮಾಡತೊಡಗಿದ್ದನ್ನು ಅವರು
ಗಮನಿಸತೊಡಗಿದ್ದರು. ಕಾರ್ಯಾಂಗ ಮತ್ತು ನ್ಯಾಯಾಂಗ
ಗಳಲ್ಲಿನ ಸರ್ಕಾರದ ಹಸ್ತಕ್ಷೇಪ ಅನುಚಿತ ಮಟ್ಟವನ್ನು ಮುಟ್ಟಿತ್ತು
ವಿರೋಧ ಪಕ್ಷಗಳು ಕುಗ್ಗಿ ಹೋಗಿದ್ದವು. ಇದೆಲ್ಲದರ ಪರಿಣಾಮ
ವಾಗಿ ಹೆಚ್ಚುತ್ತಿದ್ದ ನಿರುದ್ಯೋಗ, ಬೆಲೆ ಏರಿಕೆ, ಬಡತನ ಹಾಗೂ
ಹಿಂಸೆಗಳಿಗೆ ಪರಿಹಾರ ಮಾರ್ಗಗಳೇ ಇಲ್ಲವಾಗಿ, ದೇಶಾದ್ಯಂತ
ಅಶಾಂತಿ ಮುಗಿಲು ಮುಟ್ಟತೊಡಗಿತ್ತು. ಸ್ವಾತಂತ್ರ್ಯಕ್ಕಾಗಿ ಮತ್ತು
ಬಡಜನರ ಆಶೋತ್ತರಗಳಿಗಾಗಿ ತಮ್ಮ ಪ್ರಾಣವನ್ನೇ ಒತ್ತೆಯಿಟ್ಟು
ಹೋರಾಡಿದ್ದ ಜೆ.ಪಿ.ಯವರಿಗೆ ಇದನ್ನೆಲ್ಲ ನೋಡುತ್ತಾ ಕೂರಲು
ಸಾಧ್ಯವಾಗಲಿಲ್ಲ.

ಜಯಪ್ರಕಾಶರು 'ಎವೆರಿಮನ್ಸ್' ಎಂಬ ಇಂಗ್ಲೀಷ್ ಪತ್ರಿಕೆ
ಆರಂಭಿಸಿ, ಅದರ ಮೂಲಕ ರಾಷ್ಟ್ರದ ರಾಜಕಾರಣಿಗಳಿಗೆ

ಕಾನೂನು ತಜ್ಞರಿಗೆ, ಬುದ್ಧಿಜೀವಿಗಳಿಗೆ; ರಾಷ್ಟ್ರದ ಸಮಸ್ಯೆಗಳನ್ನು ಪರಿಹರಿಸಲಾಗದ ಅಸಮರ್ಥ ಸರ್ಕಾರ ತನ್ನನ್ನು ತಾನು ರಕ್ಷಿಸಿ ಕೊಳ್ಳಲು ಸರ್ವಾಧಿಕಾರಿಯಾಗುತ್ತಿರುವುದರ ಅಪಾಯದ ಸೂಚನೆ ನೀಡಿದರು. ಈ ಬಗ್ಗೆ ಪ್ರಧಾನಿ ಇಂದಿರಾಗೂ ತಿಳಿ ಹೇಳಿದರು. ಆದರೆ ಪ್ರಧಾನಿ ಇದನ್ನು ನಿರ್ಲಕ್ಷಿಸಿದಾಗ ಜೆ.ಪಿ. ವಿರೋಧ ಪಕ್ಷಗಳ ಒಕ್ಕೂಟವೊಂದರ ಪ್ರಯತ್ನ ಮಾಡಿದರು. ಆದರೆ ಇದೆಲ್ಲವೂ ಅಷ್ಟು ಕಾರ್ಯಶೀಲ ಅಲ್ಲ ಎನ್ನಿಸಿದಾಗ ಅವರ ಗಮನ ವಿದ್ಯಾರ್ಥಿ-ಯುವಜನರತ್ತ ಹರಿಯಿತು. ಅವರು ಈ ಸಮುದಾಯಗಳನ್ನು ಉದ್ದೇಶಿಸಿ ಮಾತನಾಡತೊಡಗಿದರು. ಮೊದಲ ಪ್ರತಿಕ್ರಿಯೆ ಗುಜರಾತ್‌ನಿಂದ ಬಂತು. ಅಲ್ಲಿ ನವ ನಿರ್ಮಾಣದ ಹೆಸರಲ್ಲಿ ಅಲ್ಲಿನ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಆರಂಭವಾಗಿದ್ದ ವಿದ್ಯಾರ್ಥಿ ಚಳುವಳಿ ಜೆ.ಪಿ. ಮಾರ್ಗದರ್ಶನ ಕೋರಿತು. ಇದು ಗುಜರಾತ್ ಸರ್ಕಾರವನ್ನು ಕೇಂದ್ರ ಸರ್ಕಾರ ವಿಸರ್ಜಿಸಬೇಕಾಗಿ ಬಂದುದರಲ್ಲಿ ಕೊನೆಗೊಂಡಿತು. ಈ ಮಧ್ಯೆ ಬಿಹಾರದಲ್ಲಿ ಕೂಡಾ ವಿದ್ಯಾರ್ಥಿಗಳು ಹಲವು ಕಡೆ ವಿದ್ಯಾರ್ಥಿ ನಿಲಯಗಳ ದುಃಸ್ಥಿತಿ ವಿರುದ್ಧ ಆರಂಭಿಸಿದ್ದ ಆಂದೋಲನವನ್ನು ಬಿಹಾರ ಸರ್ಕಾರ ನಿರ್ಲಕ್ಷಿಸಿ ಆಂದೋಲನವನ್ನು ಬಲ ಪ್ರಯೋಗದ ಮೂಲಕ ದಮನಮಾಡಲು ಯತ್ನಿಸಿತ್ತು. ಇದರಿಂದಾಗಿ, ಅದು ಸರ್ಕಾರದ ರಾಜೀನಾಮೆಗೆ ಆಗ್ರಹಿಸಲು ಆಂದೋಲನವಾಗಿ ಮಾರ್ಪಾಡಾಗಿತ್ತು. ಈ ಆಂದೋಲನ ಕೂಡಾ ಜೆ.ಪಿ. ಮಾರ್ಗದರ್ಶನವನ್ನು ಕೋರಿತು.

ಸಂಪೂರ್ಣ ಕ್ರಾಂತಿ ಆಂದೋಲನದತ್ತ

ಜೆ.ಪಿ. ಈ ಅಶಾಂತಿಯನ್ನೆಲ್ಲ ಒಂದು ರೋಗಚಿಹ್ನೆಯೆಂದು ಭಾವಿಸಿದರು. ಈ ಚಿಹ್ನೆ ಸೂಚಿಸುವ ರೋಗಕ್ಕೆ ದೇಶವೇ ತುತ್ತಾಗಿದೆಯೆಂದು ಗ್ರಹಿಸಿ, ಅದರ ನಿವಾರಣೆಗಾಗಿ ಎಲ್ಲ-

ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ, ಬೌದ್ಧಿಕ, ದಾರ್ಶನಿಕ–ನೆಲೆಗಳಲ್ಲಿ ಬದಲಾವಣೆ ಅಗತ್ಯವೆಂದು ಕಂಡುಕೊಂಡರು. ಇಂತಹ ಸಮಗ್ರ ಬದಲಾವಣೆಗಾಗಿ 'ಸಂಪೂರ್ಣ ಕ್ರಾಂತಿ'ಯ ಪರಿಕಲ್ಪನೆಯೊಂದನ್ನು ರೂಪಿಸಿದರು. ಅಹಿಂಸೆಯ ಆಧಾರದ ಮೇಲೆ ಜನಶಕ್ತಿಯನ್ನು ಸಂಘಟಿಸುವ ಮೂಲಕ ರಾಜಕಾರಣಿ, ಅಧಿಕಾರಿ ಹಾಗೂ ವ್ಯಾಪಾರಿಗಳ ಭ್ರಷ್ಟಾಚಾರ ಮತ್ತು ಧರ್ಮಾಂಧತೆ, ಜಾತ್ಯಾಂಧತೆಗಳನ್ನೂ ನಿರ್ಮೂಲನ ಮಾಡುವ; ಹಾಗೂ ಪ್ರಜಾಪ್ರಭುತ್ವ ಸಂಸ್ಥೆಗಳನ್ನು ಸಂರಕ್ಷಿಸಲು ಚುನಾವಣಾ ಸುಧಾರಣೆಗಳನ್ನು ಮತ್ತು ಸಮಾಜ ಸೇವೆಯನ್ನು ಅವಿಭಾಜ್ಯ ಅಂಗವಾಗಿ ಹೊಂದಿರುವ ನೈತಿಕ ಹಾಗೂ ವೃತ್ತಿಪರವಾದ ಸರ್ವಸಾಮಾನ್ಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುವ ಮೂಲಭೂತ ಪರಿವರ್ತನೆಯನ್ನು ಆಗು ಮಾಡುವ ಉದ್ದೇಶ ಇದರದ್ದು. ಇದಕ್ಕಾಗಿ ಅವರು ವಿದ್ಯಾರ್ಥಿ ಹಾಗೂ ಯುವಶಕ್ತಿಗೆ ಸಂಘರ್ಷಕ್ಕಾಗಿ ಕರೆ ಕೊಟ್ಟರು. ಇದಕ್ಕಾಗಿ ಅವರು ದೇಶಾದ್ಯಂತ ಪ್ರವಾಸ ಮಾಡಿದರು. ಯಾವುದನ್ನು ತಾವು ಸಮಾಜವಾದಿ ಆಂದೋಲನದಲ್ಲಿದ್ದುಕೊಂಡು ಪಕ್ಷ ರಾಜಕಾರಣದ ಮೂಲಕ ಸಾಧಿಸಲು ಅಸಾಧ್ಯವಾಗಿತ್ತೋ, ಅದನ್ನು ಅವರು ಈ 'ಸಂಪೂರ್ಣ ಕ್ರಾಂತಿ' ಆಂದೋಲನದ ಮೂಲಕ ಸಾಧಿಸಲು ಯತ್ನಿಸಿದರು.

ತಮ್ಮ ಸಂಪೂರ್ಣ ಕ್ರಾಂತಿಯ ಉದ್ದೇಶವನ್ನು ಸಂಕ್ಷಿಪ್ತವಾಗಿ ಅವರು ರಾಷ್ಟ್ರಕ್ಕೆ ವಿವರಿಸಿದ್ದು ಹೀಗೆ: 'ಈಗಿರುವ ಪ್ರಜಾತಂತ್ರದಲ್ಲಿ ಜನತೆಗಿರುವ ಸ್ಥಾನ ಮತ್ತು ಮಹತ್ವ ಅತ್ಯಲ್ಪ. ಚುನಾವಣೆ ನಡೆದಾಗ ಓಟಿನ ಪೆಟ್ಟಿಗೆಗೆ ಚೀಟಿ ಹಾಕುವುದು ಮಾತ್ರ ಈಗ ಪ್ರಜೆಗಿರುವ ಸ್ಥಾನ. ಅಲ್ಲಿಗೆ ಎಲ್ಲ ಮುಗಿಯಿತು. ಉಮೇದುವಾರನ ಆಯ್ಕೆಯಲ್ಲಾಗಲೀ, ಅವನು ಆರಿಸಿಬಂದು

ಜನತಾ ಪ್ರತಿನಿಧಿಯಾದ ನಂತರ ಅವನ ಮೇಲೆ ನಿಯಂತ್ರಣ ಅಥವಾ ಅಂಕುಶ ಇಡುವುದಕ್ಕಾಗಲೀ, ಅವನಿಂದ ಅವನು ಮಾಡಿದ ಕೆಲಸದ ವರದಿ ಕೇಳುವುದಕ್ಕಾಗಲೀ ಜನತೆಗೆ ಯಾವ ಅಧಿಕಾರವೂ ಇಲ್ಲ. ಜನತೆಯ ಪ್ರತಿನಿಧಿಗಳಾಗುತ್ತಾರೆ, ಆದರೆ ಜನತೆಯ ಯಾವ ಅಧಿಕಾರವೂ ಅವರ ಮೇಲೆ ಇರುವುದಿಲ್ಲ. ಇದು ಹೋಗಬೇಕು. ಜನತೆಗೆ ನಿಮ್ಮ ಮೇಲೆ ವಿಶ್ವಾಸ ಇಲ್ಲವಾದರೆ ನೀವು ಅಧಿಕಾರದಲ್ಲಿ ಇರಲು ನಿಮಗೆ ಯಾವ ಹಕ್ಕಿದೆ? ಇಂದಿನ ಪ್ರಜಾತಂತ್ರದ ದೊಡ್ಡ ದೋಷ ತನ್ನ ಪ್ರತಿನಿಧಿ ಎಂದು ಪರಿಚಯವೇ ಇಲ್ಲದ ಯಾರನ್ನೋ ಉಮೇದವಾರರನ್ನಾಗಿ ನಿಲ್ಲಿಸುವುದು ಮತ್ತು ಅವನ ಮೇಲೆ ನಿಯಂತ್ರಣದ ಯಾವ ಅಧಿಕಾರಗಳೂ ಪ್ರಜೆಗೆ ಇಲ್ಲದಿರುವುದು. ಈ ಸಂಘರ್ಷದ ಮೂಲಕ ಇದು ಹೋಗುತ್ತದೆಂದು ನಾನು ಭಾವಿಸಿದ್ದೇನೆ.'

ಇದಕ್ಕೆ ದೇಶದ ಯುವಜನತೆಯೂ ಸ್ಪಂದಿಸಿತು. ಬಿಹಾರದಲ್ಲಿ ತಾವು ಸರ್ವೋದಯ ಚಳುವಳಿಕಾರರಾಗಿ ಮಾಡಿದ್ದ 'ಗ್ರಾಮಸ್ವರಾಜ್ಯ' ಕಟ್ಟುವ ಕೆಲಸವನ್ನು ಜೆ.ಪಿ. ವಿದ್ಯಾರ್ಥಿ ಚಳುವಳಿಯ ಮೂಲಕ ಮುಂದುವರೆಸಿ ಸದೃಢಗೊಳಿಸಲು ನಿರ್ಧರಿಸಿದರು. ಇದನ್ನು ಇತರ ರಾಜ್ಯಗಳಿಗೂ ಹಬ್ಬಿಸಲು ಸಂಘಟನೆಗಳನ್ನು ರೂಪಿಸಿದರು. ಅಂತಹದೊಂದು ಸಂಘಟನೆ ಕರ್ನಾಟಕದಲ್ಲೂ ರೂಪುಗೊಂಡಿತ್ತು. ಇದಕ್ಕೆ ಬೆಂಬಲವಾಗಿ ವಿರೋಧ ಪಕ್ಷಗಳನ್ನೂ ಸಜ್ಜುಗೊಳಿಸಲು ಅವರು ಪ್ರಯತ್ನಿಸಿದರು. ಆದರೆ ಈ ಕೆಲಸವನ್ನು ಸಹವಾಗಿಯೇ ರಾಜ್ಯ ಮತ್ತು ಕೇಂದ್ರ ಸರ್ಕಾರಗಳನ್ನು ಎದುರು ಹಾಕಿಕೊಂಡೇ ಮಾಡಬೇಕಾಯಿತು. ಇದರಿಂದಾಗಿ ಜೆ.ಪಿ. 'ಸಿ.ಐ.ಎ. ಏಜೆಂಟ್' ಎಂಬಂತಹ ಹಲವು ಕ್ಷುಲ್ಲಕ ಆರೋಪಗಳನ್ನೂ, ಮಾತಕತೆಗೆ ದೆಹಲಿಗೆ ಆಹ್ವಾನಿಸಲ್ಪಟ್ಟು ಮಾತುಕತೆಯೇ ನಡೆಯದಂತಹ ಅನುಚಿತ ಅವಮಾನಗಳನ್ನು

ಸಹಿಸಬೇಕಾಯಿತಲ್ಲದೆ ಪ್ರತಿಭಟನೆಗಳ ಸಂದರ್ಭದಲ್ಲಿ ಲಾಠಿ ಮತ್ತು ಅಶ್ರುವಾಯು ಪ್ರಯೋಗಗಳ ಬರ್ಬರ ದಾಳಿಯನ್ನೂ ಎದುರಿಸಿ, ದೈಹಿಕವಾಗಿ ಅಸ್ವಸ್ಥರಾಗಬೇಕಾಯಿತು.

–೯–

ಮತ್ತೆ ಸೆರೆಮನೆಯತ್ತ

ಈ ಮಧ್ಯೆ ೧೯೭೧ರ ಚುನಾವಣೆಗಳಲ್ಲಿ ಇಂದಿರಾಗಾಂಧಿಯವರು ರಾಯ್‌ಬರೇಲಿಯಿಂದ ಆಗಿದ್ದ ಆಯ್ಕೆಗೆ ಸಂಬಂಧಿಸಿದಂತೆ ಪ್ರತಿಸ್ಪರ್ಧಿ ರಾಜನಾರಾಯಣರು ಅಲಹಾಬಾದ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಅರ್ಜಿ ಇತ್ಯರ್ಥಗೊಂಡಿತು. ಅದರಲ್ಲಿ, ಇಂದಿರಾ ಗಾಂಧಿ ಚುನಾವಣಾ ಕಾನೂನುಗಳನ್ನು ಉಲ್ಲಂಘಿಸಿದ್ದಾರೆಂದು ನ್ಯಾಯಾಲಯ ಅವರ ಲೋಕಸಭಾ ಸದಸ್ಯತ್ವವನ್ನು ಅನೂರ್ಜಿತಗೊಳಿಸಿತು. ಇದರ ವಿರುದ್ಧ ಇಂದಿರಾ ಗಾಂಧಿ ಸರ್ವೋಚ್ಚ ನ್ಯಾಯಾಲಯಕ್ಕೂ ಮೇಲ್ಮನವಿ ಸಲ್ಲಿಸಿ, ಭಾಗಶಃ ತಡೆಯಾಜ್ಞೆ ಪಡೆದರು. ಆದರೆ ನ್ಯಾಯಾಲಯ, ಸಂಸತ್ತಿನಲ್ಲಿ ಯಾವುದೇ ನಿರ್ಣಯದ ಮೇಲೆ ಮತ ಹಾಕುವ ಅವರ ಅಧಿಕಾರವನ್ನು ಅಮಾನತ್ತಿನಲ್ಲಿಟ್ಟಿತು. ಈ ಹಿನ್ನೆಲೆಯಲ್ಲಿ ವಿರೋಧ ಪಕ್ಷಗಳು ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಪು ಬರುವವರೆಗೂ ಇಂದಿರಾ ಪ್ರಧಾನಿ ಸ್ಥಾನ ತೊರೆಯಬೇಕೆಂದು ಆಗ್ರಹಿಸಿದವು. ದೇಶಾದ್ಯಂತ ಪ್ರತಿಭಟನೆಗಳೂ ನಡೆದವು.

೧೯೭೫ರ ಜೂನ್ ೨೫ ರಂದು ದೆಹಲಿಯ ಬೋಟ್ ಕ್ಲಬ್ ಮೈದಾನದಲ್ಲಿ ಜೆ.ಪಿ. ಯವರ ನೇತೃತ್ವದಲ್ಲಿ ಬೃಹತ್ ಸಭೆಯೊಂದನ್ನು ನಡೆಸಿದ ವಿರೋಧ ಪಕ್ಷಗಳು, ಇಂದಿರಾ ಗಾಂಧಿ ಕೂಡಲೇ ರಾಜೀನಾಮೆ ನೀಡದಿದ್ದರೆ ಅವರ ಮನೆಗೆ ಮುತ್ತಿಗೆ ಹಾಕುವುದಾಗಿ ಘೋಷಿಸಿದವು. ಜೆ.ಪಿ., ಸರ್ಕಾರದ ಯಾವುದೇ

ಸಂವಿಧಾನ ವಿರೋಧಿ ಆಜ್ಞೆಗಳನ್ನು ಪಾಲಿಸಿದಂತೆ ಸೇನೆ, ಪೋಲೀಸ್ ಸೇರಿದಂತೆ ಸರ್ಕಾರಿ ನೌಕರರಿಗೆ ಕರೆ ನೀಡಿದರು. ಅಂದು ಮಧ್ಯರಾತ್ರಿಯೇ ಜೆ.ಪಿ. ಸೇರಿದಂತೆ, ವಿರೋಧ ಪಕ್ಷಗಳ ಎಲ್ಲ ನಾಯಕರನ್ನು ಬಂಧಿಸಿ ಸೆರೆಮನೆ/ಸ್ಥಾನಬದ್ಧತೆಯಲ್ಲಿರಿಸ ಲಾಯಿತು. ಆಂತರಿಕ ಅಶಾಂತಿಯ ಕಾರಣವೊಡ್ಡಿ, ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಅಮಾನತ್ತಿನಲ್ಲಿಟ್ಟು ತುರ್ತುಪರಿಸ್ಥಿತಿ ಯನ್ನು ಘೋಷಿಸಲಾಯಿತು. ಜೆ.ಪಿ.ಯವರನ್ನು ಮೊದಲು ಹರ್ಯಾಣದ ಸೋಹನಾ ಎಂಬಲ್ಲಿನ ಅತಿಥಿಗೃಹವೊಂದರಲ್ಲಿ ಇರಿಸಲಾಗಿತ್ತಾದರೂ, ಅವರ ಆರೋಗ್ಯ ಹದಗೆಟ್ಟ (ಈ ಬಗ್ಗೆಯೂ ಮುಂದೆ ಅನೇಕ ಪ್ರಶ್ನೆಗಳನ್ನು ಎತ್ತಲಾಯಿತು) ಪರಿಣಾಮವಾಗಿ ಚಂಡೀಗಢದ ಸ್ನಾತಕೋತ್ತರ ವೈದ್ಯಕೀಯ ಸಂಸ್ಥೆಯ ಕೊಠಡಿ ಯೊಂದಕ್ಕೆ ವರ್ಗಾಯಿಸಲಾಯಿತು. ಇಲ್ಲಿಯೇ, ಸುಮಾರು ಒಂದೂವರೆ ವರ್ಷಗಳ ಏಕಾಂತವಾಸದ ಸಮಯದಲ್ಲೇ, ಜೆ.ಪಿ. ತಮ್ಮ ಹೋರಾಟದ ಬದುಕಿನ ನೋವು–ನಿರೀಕ್ಷೆಗಳನ್ನು ದಾಖಲಿಸಿ ರುವ 'ಸೆರೆಮನೆಯ ದಿನಚರಿ'ಯನ್ನು ಬರೆದುದು. ಒಂಟಿ ಸೆರೆಮನೆವಾಸದ ಸಂದರ್ಭದಲ್ಲಿ ತಮ್ಮ ಹೋರಾಟದ ಜೊತೆಗೆ ಬದುಕನ್ನೂ ಒಮ್ಮೆ ಹಿನ್ನೋಡಿಕೊಂಡ ದಾಖಲೆಗಳಂತಿವೆ ಈ ದಿನಚರಿ.

ಜೆ.ಪಿ.ಯವರ ಆರೋಗ್ಯ ಹದಗೆಟ್ಟಾಗ, ಸರ್ಕಾರ ೧೯೭೫ರ ನವೆಂಬರ್ ೧೨ರಂದು ಅವರನ್ನು 'ಪರೋಲ್' ಮೇಲೆ ಬಿಡುಗಡೆ ಮಾಡಿತು. ಆ ಹೊತ್ತಿಗೆ ಅವರ ಮೂತ್ರಪಿಂಡಗಳು ಕೆಲಸ ಮಾಡಲಾಗದಷ್ಟು ದುರ್ಬಲಗೊಂಡಿದ್ದವು. ಅವರು ತಮ್ಮ ಪಟ್ನಾ ನಿವಾಸಕ್ಕೆ ಹಿಂದಿರುಗಿದ ಮೇಲೆ ಮನೆಯಲ್ಲೇ ಅವರಿಗೆ ಅವರ ಗೆಳೆಯರು 'ಡಯಾಲಿಸಿಸ್' ಚಿಕಿತ್ಸೆಯ ವ್ಯವಸ್ಥೆ ಮಾಡಿಸಿದರು. ಜೆ.ಪಿ. ಸ್ವಗೃಹ 'ಕದಂಕುವಾ' ಸೇರಿ ಸುಧಾರಿಸಿಕೊಳ್ಳುತ್ತಿದ್ದಂತೆ,

ಇಂದಿರಾ ಗಾಂಧಿಯವರು ರಾಜಕೀಯ ವಾತಾವರಣ ತಮ್ಮ ಪರವಾಗಿ ಮಾರ್ಪಾಡಾಗಿದೆ ಎಂದು ಭಾವಿಸಿಯೋ ಅಥವಾ ವಿದೇಶಗಳ, ವಿಶೇಷವಾಗಿ ಪಾಶ್ಚಿಮಾತ್ಯ ದೇಶಗಳ ಒತ್ತಡದಿಂದಾಗಿಯೋ ೧೯೭೭ರಲ್ಲಿ ಜನವರಿಯಲ್ಲಿ ತುರ್ತು ಪರಿಸ್ಥಿತಿಯನ್ನು ಭಾಗಶಃ ಸಡಿಲಿಸಿದರು. ಮಾರ್ಚ್‌ನಲ್ಲಿ ಚುನಾವಣೆ ನಡೆಯುವುದೆಂದು ಘೋಷಿಸಿದರು. ವಿರೋಧ ಪಕ್ಷಗಳ ನಾಯಕರನ್ನು ಸೆರೆಮನೆಗಳಿಂದ ಬಿಡುಗಡೆ ಮಾಡಲಾಯಿತು.

ಕೊನೆಯ ಹೋರಾಟ

ಜೆ.ಪಿ., ವಿರೋಧ ಪಕ್ಷಗಳಿಗೆ ಇದೇ ನಿಮಗೆ ಕೊನೆಯ ಅವಕಾಶ ಎಂದು ಎಚ್ಚರಿಸಿ ಅವರನ್ನೆಲ್ಲ ಒಗ್ಗೂಡಿಸಿ 'ಜನತಾ ಪಕ್ಷ'ವನ್ನು ರೂಪಿಸಿದರು. ಇದರಲ್ಲಿ ಸಮಾಜವಾದಿ ಪಕ್ಷ, ಭಾರತೀಯ ಜನಸಂಘ, ಭಾರತೀಯ ಲೋಕದಳ ಹಾಗೂ ಸಂಸ್ಥಾ ಕಾಂಗ್ರೆಸ್ ಸೇರಿದ್ದವು. ಆಡಳಿತ ಪಕ್ಷದಿಂದಲೂ ಕೆಲವು ಗುಂಪುಗಳು ಬಂದು ಈ ಪಕ್ಷವನ್ನು ಸೇರಿಕೊಂಡವು. ಜೆ.ಪಿ. ತಮ್ಮ ಅನಾರೋಗ್ಯವನ್ನು ಲೆಕ್ಕಿಸದೆ ದೇಶಾದ್ಯಂತ ಬಿರುಗಾಳಿಯಂತೆ ಸುತ್ತಿ ಪ್ರಚಾರ ಮಾಡಿದರು. ಜನತಾಪಕ್ಷ ಪ್ರಚಂಡ ಬಹುಮತ ಗಳಿಸಿ ಗೆದ್ದಿತು. ಇಂದಿರಾಗಾಂಧಿ ಹಾಗೂ ತುರ್ತು ಪರಿಸ್ಥಿತಿಯ 'ದೊರೆ' ಎನಿಸಿದ್ದ ಅವರ ಮಗ ಸಂಜಯಗಾಂಧಿ ಇಬ್ಬರೂ ವೈಯಕ್ತಿಕವಾಗಿ ಸೋತಿದ್ದರು. ಜೆ.ಪಿ. ಇಂದಿರಾ ಮನೆಗೆ ಹೋಗಿ ಸಾಂತ್ವನ ಹೇಳಿಬಂದರು. ೧೯೬೭ರಲ್ಲಿನ ಲೋಹಿಯಾರ ಕಾಂಗ್ರೆಸ್ಸೇತರ ವಾದದ ಫಲವಾಗಿ ರಚಿತವಾಗಿದ್ದ ಸಮ್ಮಿಶ್ರ ಸರ್ಕಾರಗಳು ಕಂಡಿದ್ದ ಗತಿಯನ್ನು ಕಣ್ಣಾರೆ ಜೆಪಿ ಕಂಡಿದ್ದರು. ಹೀಗಾಗಿ ಅವರು ಜನತಾ ಪಕ್ಷದ ಮೊರಾರ್ಜಿ ದೇಸಾಯಿ ನೇತೃತ್ವದ ಸಚಿವ ಸಂಪುಟಕ್ಕೆ ಗಾಂಧಿ ಸಮಾಧಿಯ ಮುಂದೆ ಗಾಂಧೀವಾದಿ ನೈತಿಕತೆಯ ಪ್ರತಿಜ್ಞೆ

ಬೋಧಿಸಿದರು. ಹೊಸ ಸರ್ಕಾರ ಗಾಂಧೀವಾದಿ ಸಮಾಜವಾದವನ್ನು ತನ್ನ ತತ್ವಪ್ರಣಾಳಿಕೆಯನ್ನಾಗಿ ಒಪ್ಪಿಕೊಂಡಿತು. ತುರ್ತು ಪರಿಸ್ಥಿತಿಯ ಸಮಯದಲ್ಲಿ ಸಂವಿಧಾನದಲ್ಲಿ ಸಂಸದೀಯ ಪ್ರಜಾಪ್ರಭುತ್ವಕ್ಕೆ ಮಾರಕವಾಗಿ ಮಾಡಿದ್ದ ತಿದ್ದುಪಡಿಗಳನ್ನು ರದ್ದುಗೊಳಿಸಿತು.

ಆದರೆ ಕೆಲವೇ ತಿಂಗಳುಗಳಲ್ಲಿ ಸರ್ಕಾರದಲ್ಲಿ ತಳಮಳ ಆರಂಭವಾಯಿತು. ಜನತಾ ಪಕ್ಷದಲ್ಲಿ ವಿವಿಧ ಪಕ್ಷಗಳ ವಿಲೀನ ಒತ್ತಡದಲ್ಲಿ, ಅವಸರದಲ್ಲಿ ಆಗಿ ನಿಜವಾದ ವಿಲೀನ ಆಗಿರಲಿಲ್ಲ. ಹೆಚ್ಚಿನ ಅಧಿಕಾರದ ಪಾಲಿಗಾಗಿ ಕಚ್ಚಾಟ ಶುರುವಾಯಿತು. ಸ್ವತಃ ಪ್ರಧಾನಿ ಮೊರಾರ್ಜಿಯವರ ಮಗನ ಮೇಲೆ ಭ್ರಷ್ಟಾಚಾರದ ಆಪಾದನೆಗಳು ಕೇಳಿಬಂದವು. ಸಮಾಜವಾದಿಗಳು, ಪಕ್ಷವನ್ನು ಆರ್.ಎಸ್.ಎಸ್. ಮೂಲದ ಜನಸಂಘ ಗುಂಪು ಆಕ್ರಮಿಸ ಕೊಳ್ಳತೊಡಗಿದೆ ಎಂದು ದೂರಿದರು. ರಾಜ್ಯ ವಿಧಾನಸಭಾ ಚುನಾವಣೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ತಾವು ಸ್ಥಾಪಿಸಿದ್ದ ಸ್ಥಳೀಯ ಜನಸಮಿತಿಗಳನ್ನು ಸಮಾಲೋಚಿಸ ಬೇಕೆಂಬ ಜೆ.ಪಿ.ಯವರ ಸೂಚನೆಯನ್ನು ಮೊರಾರ್ಜಿ ದೇಸಾಯಿ ತಳ್ಳಿ ಹಾಕಿದರು. ಜೆ.ಪಿ. ಕಟ್ಟಿದ ಸರ್ಕಾರದಲ್ಲಿ ಜೆ.ಪಿ.ಗೇ ಸ್ಥಾನವಿಲ್ಲದಂತಾಯಿತು. ಅವರು ದುರ್ಬಲಗೊಳ್ಳುತ್ತಿದ್ದ ತಮ್ಮ ಅನಾರೋಗ್ಯದ ನಡುವೆಯೇ ಸರ್ಕಾರಕ್ಕೆ ಒಂದೆರಡು ಬಾರಿ ಎಚ್ಚರಿಕೆ ನೀಡಿದರು. ತಮ್ಮ ಬದುಕಿನ ಈ ದೊಡ್ಡ ಹಾಗೂ ಐತಿಹಾಸಿಕ ಸಾಹಸ ವ್ಯರ್ಥವಾಗದಂತೆ ನೋಡಿಕೊಳ್ಳಲು ತಾವು ತುರ್ತುಪರಿಸ್ಥಿತಿಗೆ ಮುನ್ನ ಆರಂಭಿಸಿದ್ದ 'ಸಂಪೂರ್ಣ ಕ್ರಾಂತಿ'ಗೆ ಆಧಾರವಾಗಿ ರಚಿಸಿದ್ದ ಜನಸಂಘರ್ಷ ಸಮಿತಿಗಳನ್ನು ಬಲಪಡಿಸುವ ಪ್ರಯತ್ನವನ್ನೂ ಮಾಡಿದರು. ಆದರೆ ಆ ಹೊತ್ತಿಗೆ

ಜನತಾಪಕ್ಷ ಒಡೆದು ಹೋಳಾಗಿ ಸರ್ಕಾರ ಅಲ್ಪಸಂಖ್ಯಾತವಾಗಿತ್ತು. ಇಂದಿರಾ ಮತ್ತೆ ಚಿಕ್ಕಮಗಳೂರು ಉಪಚುನಾವಣೆಯಲ್ಲಿ ಗೆದ್ದು ಸಂಸತ್ತನ್ನು ಪ್ರವೇಶಿಸಿದ್ದರು. ಅವರಿಗೆ ಜೆ.ಪಿ. ಶುಭ ಹಾರೈಸಿದರು.

೧೯೭೯ರ ಅಕ್ಟೋಬರ್ ೮ರಂದು ತಮ್ಮ ೭೭ನೇ ವಯಸ್ಸಿನಲ್ಲಿ ಜೆ.ಪಿ. ತಮ್ಮ ಹೋರಾಟದ ಬದುಕಿಗೆ, ಬಹುಶಃ ದಟ್ಟ ವಿಷಾದದೊಂದಿಗೆ ಅಂತ್ಯ ಹಾಡಿದರು.

-೧೦-

ಜೆಪಿ ನಂತರ ಈಗ...

ಜೆಪಿ ನಿಧನರಾಗಿ ಮುವ್ವತ್ತು ವರ್ಷಗಳೇ ಸಂದಿವೆ. ಆನಂತರ ರಾಷ್ಟ್ರ ರಾಜಕಾರಣದಲ್ಲಿ ನಿರ್ಣಾಯಕ ಬದಲಾವಣೆಗಳಾಗಿವೆ. ಅವರು ಕಾಲಾನುಕಾಲಕ್ಕೆ ಎತ್ತಿ ಹಿಡಿದಿದ್ದ ಮಾರ್ಕ್ಸ್‌ವಾದ, ಪ್ರಜಾಸತ್ತಾತ್ಮಕ ಸಮಾಜವಾದ, ಗಾಂಧಿವಾದ ಮತ್ತು ಸರ್ವೋದಯಗಳು ಸೋತು ಅಪ್ರಸ್ತುತವಾದ ಸಿದ್ಧಾಂತಗಳೆಂದು ಹೇಳಲಾಗುತ್ತಿರುವ ದಿನಗಳಿವು. ಆದರೂ ಜೆಪಿಯನ್ನು ನಾವು ಇಂದು ನೆನಪಿಸಿಕೊಳ್ಳುತ್ತಿದ್ದರೆ ಅದಕ್ಕೆ ಕಾರಣ, ಈ ಎಲ್ಲ ಸಿದ್ಧಾಂತಗಳನ್ನು ಅಪ್ರಸ್ತುತವೆಂದು ಬಿಂಬಿಸಿರುವ ನಿರ್ಣಾಯಕ ಬದಲಾವಣೆಗಳು 'ಅಭೂತಪೂರ್ವ ಪ್ರಗತಿ'ಯ ಹೆಸರಲ್ಲಿ ಉಂಟು ಮಾಡಿರುವ ಪರಿಣಾಮಗಳು ನಮ್ಮನ್ನು ಆಳದಲ್ಲೆಲ್ಲೋ ಅಲ್ಲಾಡಿಸುತ್ತಿರುವುದೇ ಆಗಿದೆ. ಬಡತನ ಮತ್ತು ಶ್ರೀಮಂತಿಕೆಗಳೆರಡರ ವ್ಯಾಖ್ಯೆಗಳೂ ಬದಲಾಗುತ್ತಾ ಸಮಾಜದಲ್ಲಿ ಉಂಟಾಗಿರುವ ತಣಿಯದ ದಾಹ ಹಾಗೂ ಕೋಮುವಾದಿ ಮತ್ತು ಭಯೋತ್ಪಾದನೆಯ ರಾಜಕಾರಣ ಹೊಸ ಹೊಸ ರೀತಿಯ ವೈವಿಧ್ಯಮಯ ಹಿಂಸೆಗಳನ್ನು ಸೃಷ್ಟಿಸುತ್ತಿದೆ. ಇದು ಭಾರತ ಒಂದು ರಾಷ್ಟ್ರವಾಗಿ, ಒಂದು ಸಂಸ್ಕೃತಿಯಾಗಿ ಉಳಿಯಬಲ್ಲದೇ ಎಂಬ;

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಎಂದೂ ಎದ್ದಿರದಿದ್ದ ಪ್ರಶ್ನೆಯನ್ನು ಹುಟ್ಟು ಹಾಕಿದೆ.

ಇದು ದೊಡ್ಡ ಪ್ರಶ್ನೆ. ಈ ಪ್ರಶ್ನೆ ನಿಜವಾದದ್ದು, ಬಹು ದೊಡ್ಡದು ಮತ್ತು ತುರ್ತಾದುದು ಎಂದು ಅನಿಸಬಲ್ಲವರಿಗೆ ಮಾತ್ರ ಇಂದು ಜೆಪಿ ನೆನಪು ಅರ್ಥಪೂರ್ಣವೆನಿಸೀತು. ಜೆಪಿ ರಚನಾತ್ಮಕ ಕೆಲಸದ ಮತ್ತು ಅನ್ಯಾಯಗಳ ವಿರುದ್ಧದ ಪ್ರಭಟನೆಯ ನಿರಂತರ ಸಂಕೇತವಾಗಿದ್ದರು. ಹಾಗೇ ಎಪ್ಪತ್ತರ ವಯಸ್ಸಿನಲ್ಲಿಯೂ ಯುವಜನರ ಸ್ಫೂರ್ತಿ ಕೇಂದ್ರವಾಗಿರುವ ಮಟ್ಟಿಗೆ ತಮ್ಮನ್ನು ತಾವು ಸದಾ ಬದಲಾವಣೆಗೆ ಒಳಪಡಿಸಿಕೊಂಡು ಕ್ರಿಯಾಶೀಲವಾಗಿ ರುತ್ತಿದ್ದರು. ಗಾಂಧಿಯನ್ನು ನೋಡದ ತಲೆಮಾರುಗಳಿಗೆ ಅವರು ಆ ಯುಗದ ವಿಶಿಷ್ಟ ಕ್ರಿಯಾಶೀಲ ಆದರ್ಶಮಯತೆಯ ಪ್ರತೀಕವಾಗಿದ್ದರು. ಹಾಗಾಗಿ, ಅವರಿರುವವರೆಗೆ ಇಂತಹ ಪ್ರಶ್ನೆ ಏಳಲು ಅವಕಾಶವೇ ಇರಲಿಲ್ಲ. ಆದರಿಂದು ಕಾರ್ಪೋರೇಟ್ ಶಾಹಿ ತನ್ನ ಅಪಾರ ಹಣದ ಬಲದಿಂದ ನಮ್ಮ ರಾಜಕಾರಣವನ್ನು ಭ್ರಷ್ಟಗೊಳಿಸಿ ಪ್ರಜಾತಂತ್ರವನ್ನೇ ವಿಕ್ಷಿಪ್ತಗೊಳಿಸುತ್ತಿರುವ ಸಂದರ್ಭ ದಲ್ಲಿ, ದೇಶದಲ್ಲಿ ಪ್ರವಾಹದ ವಿರುದ್ಧ ಈಜಿ ಬರಲಿರುವ ದುರ್ದಿನಗಳ ಬಗ್ಗೆ ಎಚ್ಚರಿಸಬಲ್ಲ ನಾಯಕರೇ ಇಲ್ಲವಾಗಿದ್ದಾರೆ. ಎಲ್ಲರೂ ಪ್ರವಾಹದ ದಿಕ್ಕಲ್ಲಿ ಈಜುತ್ತಾ ಸುಲಭ ರಾಜಕಾರಣ ಮಾಡುವವರೇ ಆಗಿದ್ದಾರೆ.

ಮತ್ತೆ ಜೆಪಿ ನೆನಪು

ಹಾಗಾಗಿ ಇಂದು ಜೆಪಿ ಎಲ್ಲಕ್ಕಿಂತ ಹೆಚ್ಚಾಗಿ ನೆನಪಿಗೆ ಬರುತ್ತಿರುವುದು, ನಮ್ಮ ಇಂದಿನ ಎಲ್ಲ ಭಯ-ಆತಂಕಗಳ ಮೂಲದಲ್ಲಿರುವ ಭ್ರಷ್ಟ ಚುನಾವಣಾ ಪದ್ಧತಿಯನ್ನು ಮೂಲಭೂತವಾಗಿ ಬದಲಾಯಿಸಿ ಜನಪರ ಮಾಡಲು ಅವರು ನಡೆಸಿದ ಪ್ರಯತ್ನದಿಂದಾಗಿ. ಅವರ 'ಸಂಪೂರ್ಣ ಕ್ರಾಂತಿ'ಯ

ಕೇಂದ್ರದಲ್ಲಿದ್ದುದು ಇದೇ. ನಮ್ಮ ರಾಜಕಾರಣವನ್ನು ಬುಡದಿಂದ ಕಟ್ಟಿ ಜನತೆಯ ಪ್ರತಿನಿಧಿ ಎಂಬುದರ ಅರ್ಥವನ್ನು ಪುನರುಜ್ಜೀವನಗೊಳಿಸುವ ಪ್ರಯತ್ನವದು. ಅವರು ಪ್ರಸ್ತಾಪಿಸುತ್ತಿದ್ದ 'ಜನತಾ ವಿಧಾನ ಸಭೆ', 'ಜನತಾ ಸಂಸತ್ತು'ಗಳ ಉದ್ದೇಶವೂ ಅದೇ ಆಗಿತ್ತು. ಅದನ್ನು ಅವರು ೧೯೭೭ರ ಚುನಾವಣೆಗಳಲ್ಲಿ ಸಾಧಿಸಿಯೂ ತೋರಿಸಿದರು. ಅವರ 'ಸಂಪೂರ್ಣ ಕ್ರಾಂತಿ' ಆಂದೋಲನದಲ್ಲಿ ಭಾಗವಹಿಸಿದ್ದ ಅನೇಕ ಯುವ ಕಾರ್ಯಕರ್ತರು ಸಂಸತ್ತಿಗೆ ಆರಿಸಿ ಹೋದರು. ನಂತರ ಉತ್ತರ ಭಾರತದಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲೂ ಇದು ಸ್ವಲ್ಪ ಮಟ್ಟಿಗೆ ಸಾಧ್ಯವಾಯಿತು. ಆದರೆ ಇವರನ್ನೆಲ್ಲ ಸಂಘಟಿಸಿ ಬದಲಾವಣೆಯ ಸಾಧನವನ್ನಾಗಿ ಮಾಡಲು ಜನತಾ ಸರ್ಕಾರದ ನೇತೃತ್ವ ವಹಿಸಿದ್ದ ಹಳೆಯ ರಾಜಕೀಯ ವ್ಯವಸ್ಥೆಯ ಪ್ರತಿನಿಧಿಗಳ ಹಠಮಾರಿತನದಿಂದಾಗಿ ಮತ್ತು ತಮ್ಮ ಅನಾರೋಗ್ಯದಿಂದಾಗಿ ಜೆಪಿಯವರಿಗೆ ಸಾಧ್ಯವಾಗಲಿಲ್ಲ. ಜೆಪಿಯವರ ಹೊಸ ರಾಜಕಾರಣದ ಈ ಪ್ರಯೋಗ ಹೀಗೆ ವಿಫಲಗೊಂಡ ನಂತರ ರಾಷ್ಟ್ರ ಹತಾಶೆಯಲ್ಲಿ ಮುಳುಗಿತೆಂದೇ ಹೇಳಬೇಕು. ಅದರೊಂದಿಗೇ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಬಿತ್ತಲಾಗಿದ್ದ ಕನಸುಗಳೂ ಬಹು ಮಟ್ಟಿಗೆ ಕಮರಿ ಹೋದುವೆಂದೂ ಹೇಳಬೇಕು.

ಇದರ ಫಲವೇ ಜಾಗತೀಕರಣ. ನಮ್ಮ ಆರ್ಥಿಕತೆಯ ಆಶಯ ಮತ್ತು ಸ್ವರೂಪಗಳನ್ನೇ ಮೂಲಭೂತವಾಗಿ ಬದಲಾಯಿಸಿದ ಈ ಜಾಗತೀಕರಣಕ್ಕೆ ಕಾರಣವಾದ ಎಲ್ಲ ಕಾನೂನುಗಳನ್ನೂ ನಮ್ಮ ಸಂಸತ್ತು ಮತ್ತು ವಿಧಾನ ಮಂಡಲಗಳು ಯಾವ ರೂಪದಲ್ಲೂ ಜನತೆಯ ಅಭಿಪ್ರಾಯ ಕೇಳದೆ, ಅಂದರೆ ಯಾವುದೇ ಜನಾದೇಶವಿಲ್ಲದೆ ಗುಟ್ಟಾಗಿ ಎಂಬಂತೆ ತ್ವರಿತ

ಗತಿಯಲ್ಲಿ ಅನುಮೋದಿಸಿದ್ದನ್ನು ನಾವು ನೋಡಿದ್ದೇವೆ. ಹಾಗಾಗಿ ಜಾಗತೀಕರಣವೆಂದರೆ ಮತ್ತೇನೂ ಆಗಿರದೆ, ನಮ್ಮ ರಾಷ್ಟ್ರದ ರಾಜಕಾರಣವನ್ನು ನಡೆಸುವ ಅಧಿಕಾರ ನಮ್ಮ ರಾಷ್ಟ್ರದ ಜನತೆಯ ಕೈತಪ್ಪಿ ಅಂತಾರಾಷ್ಟ್ರೀಯ ಆರ್ಥಿಕ ರಾಜಕಾರಣವನ್ನು ನಿಯಂತ್ರಿಸುವ ಸಂಸ್ಥೆಗಳ ಕೈವಶವಾದ ದುರಂತ ಕಥೆಯೇ ಆಗಿದೆ. ಇಂದು ಮುಕ್ತ ಉದ್ಯಮದ ಹೆಸರಲ್ಲಿ ವಿದೇಶಗಳಿಂದ ಹಣ ಹರಿದು ಬರುವ ಅನೇಕ ಬಾಗಿಲುಗಳನ್ನು ತೆರೆಯಲಾಗಿದೆ. ಹಣದ ಈ ಹುಚ್ಚು ನರ್ತನ ನಮ್ಮ ವಿವೇಕವನ್ನು ಮಸುಕುಗೊಳಿಸುತ್ತಿದೆ. ನಮ್ಮ ಪ್ರಜ್ಞೆಯನ್ನೇ ನಿಶ್ಚೇಷ್ಟಿತಗೊಳಿಸತೊಡಗಿದೆ. ಹಾಗಾಗಿ ಈ ಬಾಗಿಲು ಗಳು ನಮ್ಮ ಬೌದ್ಧಿಕ ಹಾಗೂ ಮಾನವ ಶ್ರಮವನ್ನು ಮತ್ತು ನೈಸರ್ಗಿಕ ಸಂಪತ್ತನ್ನು ಅಗ್ಗದ ದರಗಳಲ್ಲಿ ಹೊರ ಸಾಗಿಸಲು ತೆರೆಯಲಾಗಿರುವ ಬಾಗಿಲುಗಳು ಕೂಡಾ ಆಗಿವೆ ಎಂಬುದೇ ನಮ್ಮ ಗಮನಕ್ಕೆ ಬರದೇ ಹೋಗಿದೆ. ಇದರ ಫಲವಾಗಿ ಬೇರೆ ಆಯ್ಕೆಗಳೇ ಕಾಣದೆ ಹೋಗಿ(ಇಲ್ಲದೆ), ಹಣ ಪಿಪಾಸುಗಳ ಕೈಗೊಂಬೆಗಳನ್ನೇ ನಾವು ನಮ್ಮ ಪ್ರತಿನಿಧಿಗಳನ್ನಾಗಿ ಆಯ್ಕೆ ಮಾಡುವ ಖಂಡನೆಗೆ ಒಳಗಾಗಿದ್ದೇವೆ. ಪ್ರಜಾಪ್ರಭುತ್ವವನ್ನು ಅವರಿಗೆ ಒತ್ತೆಯಿಡುವ ದುಃಸ್ಥಿತಿಗೆ ಈಡಾಗಿದ್ದೇವೆ.

ಇಂತಹ ಸಂದರ್ಭದಲ್ಲಿ, ಜೆಪಿಯವರ ಬದುಕಿನಲ್ಲಿ ಕಾಣುವ ಸರಳತೆ, ಬದ್ಧತೆ ಮತ್ತು ಅನ್ಯಾಯಗಳ ವಿರುದ್ಧ ಹೋರಾಡುವ ಕೆಚ್ಚು ಮಾತ್ರ ನಮ್ಮ ಬದುಕಿನ ಆತ್ಯಂತಿಕ ಘನತೆ ಯನ್ನು ಕಾಪಾಡಬಲ್ಲ ಸ್ವಾತಂತ್ರ್ಯ, ಸಮಾನತೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಉಳಿಸಬಲ್ಲವು ಎಂಬುದು ನಮಗೆ ಮತ್ತೆ ಮತ್ತೆ ನೆನಪಿಗೆ ಬರಬೇಕಾದ ಸಂಗತಿಯಾಗಿದೆ.

* * *

ಹೆಚ್ಚಿನ ಓದಿಗಾಗಿ:

೧. ಜಯಪ್ರಕಾಶ್ ನಾರಾಯಣ: ಒಂದು ಅಪೂರ್ಣ ಕ್ರಾಂತಿಯ ಕಥೆ

ಲೇ: ಡಿ.ಎಸ್. ನಾಗಭೂಷಣ ಪ್ರ: ಲೋಹಿಯಾ ಪ್ರಕಾಶನ, ಬಳ್ಳಾರಿ(೨೦೦೩)/

ಅಭಿರುಚಿ ಪ್ರಕಾಶನ, ಮೈಸೂರು(೨೦೦೮- ಪರಿಷ್ಕೃತ ಎರಡನೇ ಆವೃತ್ತಿ)

೨. ಸಂಪೂರ್ಣ ಕ್ರಾಂತಿ **(ಜೆಪಿಯವರ ಭಾಷಣಗಳು)**

ಕನ್ನಡಕ್ಕೆ: ಟಿ.ಎಸ್. ಅನಂತರಂಗಾಚಾರ್ ಪ್ರ: ಜನ ಪ್ರಕಾಶನ, ಬೆಂಗಳೂರು(೧೯೭೭)

೩. ಕರ್ನಾಟಕದಲ್ಲಿ ಜೆ.ಪಿ. ಮತ್ತು ಸಂಪೂರ್ಣ ಕ್ರಾಂತಿ

ಲೇ:ಪಿ.ವೆಂಕೋಬರಾವ್ ಪ್ರ: ಜೀವನ ವಿಕಾಸ ಸಾಹಿತ್ಯ, ಬೆಂಗಳೂರು(೨೦೦೪)

೩. ಜೆಪಿ ಸೆರೆಮನೆಯ ದಿನಚರಿ **(ಮೂರನೇ ಪರಿಷ್ಕೃತ ಮುದ್ರಣ)**

ಕನ್ನಡಕ್ಕೆ: ಡಿ.ಎಸ್.ನಾಗಭೂಷಣ ಪ್ರ: ನೆಲಮನೆ ಪ್ರಕಾಶನ, ಮೈಸೂರು(೧೯೭೭)/

ರೂಪ ಪ್ರಕಾಶನ, ಮೈಸೂರು (೨೦೦೯-ಪರಿಷ್ಕೃತ ಮೂರನೇ ಆವೃತ್ತಿ)

ಗೀತಾಂಜಲಿ ಪುಸ್ತಕ ಪ್ರಕಾಶನ

ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರ ನಗರ, ಶಿವಮೊಗ್ಗ 577201
ಮೊಬೈಲ್– 94498 86390, 99161 97291

ನಮ್ಮ ಕೆಲವು ಪ್ರಕಟಣೆಗಳು

- ಗಂಡುಗಲಿ ಮದಕರಿನಾಯಕ (ಕಾದಂಬರಿ)/ ಬಿ.ಎಲ್ ವೇಣು/ 195/–
- ವಿಷದಿಂದ ಪುಟಿಯಿತು ಅಮೃತ (ಕಾದಂಬರಿ) / 80/–
  ದಮಯಂತಿ ಶ್ರೀಕಾಂತ
- ಗಿಡಗಳ ಮೇಲೆ ಧೂಳು (ಕಾದಂಬರಿ) / 150/–
  ಗೋವಿಂದ ಮಿಶ್ರ: ಅನುವಾದ : ಆರ್.ಪಿ.ಹೆಗಡೆ
- ಒಡೆದ ಕನ್ನಡಿ (ಕಾದಂಬರಿ) / ಡಾ. ಕೇಶವ ಶರ್ಮ ಕೆ/ 195/–
- ಮುಖವಾಡದವರು (ಕಾದಂಬರಿ) / ಡಾ.ನಾ. ಡಿಸೋಜ/ 80/–
- ಶತಕತ್ರಯರು (ಸಂಸ್ಕೃತಿ ಚಿಂತನ ಬರಹಗಳು) / ಜೆ.ವಿ. ಜಯರಾಜಶೇಖರ/ 85/–
- ಲಿಂಗಲೀಲಾ ಚಾರಿತ್ರ ಸಂಗ್ರಹ (ಸಂಸ್ಕೃತಿ ಚಿಂತನ ಬರಹಗಳು) / 85/–
  ಜೆ.ವಿ. ಜಯರಾಜಶೇಖರ
- ಕಾಲುದಾರಿ (ಕಥಾ ಸಂಕಲನ) / ದವನ ಸೊರಬ/ 80/–
- ಪಂಚತಂತ್ರ (ಮಕ್ಕಳಿಗಾಗಿ ಕಥಾ ಸಂಕಲನ) / ಡಾ.ನಾ. ಡಿಸೋಜ/ 30/–
- ಹಿತೋಪದೇಶ (ಮಕ್ಕಳಿಗಾಗಿ ಕಥಾ ಸಂಕಲನ) / 30/–
  ಡಾ.ನಾ. ಡಿಸೋಜ
- ಗುರುದೇವರ ಕಥೆಗಳು (ಮಕ್ಕಳಿಗಾಗಿ ಕಥಾ ಸಂಕಲನ) / 30/–
  ಡಾ.ನಾ. ಡಿಸೋಜ
- ಹಾ। ಸವಿಗನ್ನಡ (ಚಿಂತನ ಬರಹಗಳು) / 30/–
  ಡಾ.ನಾ. ಡಿಸೋಜ
- ವಿವೇಕ ವಿವೇಚನೆ (ಚಿಂತನ ಬರಹಗಳು) / 45/–
  ಡಾ.ನಾ. ಡಿಸೋಜ
- ನುಡಿಗನ್ನಡ (ಚಿಂತನ ಬರಹಗಳು) / 75/–
  ಸಿ.ಟಿ. ಶೈಲಾ ಜಯಕುಮಾರ
- ನಿಮ್ಮ ಕನಸಿನ ರಹಸ್ಯ (ವೈಜ್ಞಾನಿಕ ದೃಷ್ಟಿಕೋನದ ಬರಹಗಳು) / 75/–
  ತಡಸೂರು ಉಮೇಶ್

- ನಾವು ಸಂತೋಷವಾಗಿರುವುದು ಹೇಗೆ? (ವ್ಯಕ್ತಿತ್ವ ವಿಕಾಸನ ಲೇಖನಗಳು) / 120/-
ಎಸ್.ಜಿ. ವೀರನ ಗೌಡ
- ಎಷ್ಟು ಬಣ್ಣದ ಇರುಳು (ಕವನ ಸಂಕಲನ) / ಮುದ್ದು ತೀರ್ಥಹಳ್ಳಿ/ 60/-
- ಚಂದ್ರನ ತುಂಡು (ಲಘು ಬರಹಗಳು) / ಮುದ್ದು ತೀರ್ಥಹಳ್ಳಿ/ 90/-
- ಮಿಲಿನಿಯಮ್ ಕನ್ನಡ ಸಾಮಾನ್ಯ ಅಧ್ಯಯನ ಕೋಶ/ (ಸ್ಪರ್ಧಾತ್ಮಕ ಪರೀಕ್ಷೆಗಳಿಗೆ)
- ಗ್ರಹಿಕೆ (ಮಹಿಳಾ ದೃಷ್ಟಿ ಕೋನದ ಲೇಖನಗಳು) / ಡಾ.ಈ. ಯರ್ರೀಸ್ವಾಮಿ/ 60/-
- ಲಿಂಗ ವ್ಯವಸ್ಥೆ ಸಂಕಥನ / 100/-
ಪ್ರೇಮ ಅಪಚಂದ (ಮಹಿಳಾ ದೃಷ್ಟಿಕೋನದ ಲೇಖನಗಳು)
- ಮಹಿಳೆ ಮತ್ತು ಜಾತಿಶ್ರೇಣಿಕರಣ: ಅಂಬೇಡ್ಕರ್ ದೃಷ್ಟಿಕೋನ/ 150/-
ಡಾ.ಈ. ಯರ್ರೀಸ್ವಾಮಿ
- ಸೋಗಡು (ಸಂಸ್ಕೃತಿ ಚಿಂತನೆ) / ಡಾ.ಈ. ಯರ್ರೀಸ್ವಾಮಿ/ 100/-
- ಇತಿಹಾಸ (ದ್ವಿ.ಪಿ.ಯು.ಸಿ ಪಠ್ಯಪುಸ್ತಕ) / ಸೀತಾರಾಮಭಟ್/ ರಾಮಪ್ರಸಾದ್/ 130
- ಹಾಸ್ಯ ಲಹರಿ (ಹಾಸ್ಯ – ಲೇಖನಗಳು) / 30/-
- ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಜಯನಗರದ ಪ್ರಾತೀನಿಧಿಕರಣ/ ಡಾ. ಗಾದಪ್ಪ/ 2
- ದೇವರಾಜ ಅರಸು (ವ್ಯಕ್ತಿ ಚಿತ್ರಣ) ಡಾ. ಹಣಮಂತ್ರಾಯ ದೊಡ್ಡಮನಿ / 190/-
- ಕುಮಾರ ರಾಮ (ವ್ಯಕ್ತಿ ಚಿತ್ರಣ) /ಷಣ್ಮುಖಪ್ಪ/ 80/-
- ಹಿರಿಯರ ಹಾದಿ/ ಪ್ರೊ. ಎಂ.ಎನ್. ಸುಂದರರಾಜ್/ 90/-
- ನೀಲನಕ್ಷೆ (ವಿಮರ್ಶೆ)/ಡಾ. ಕೇಶವ ಶರ್ಮ ಕೆ. / 280/-
- ಕಂಡದ್ದು–ಕಾಣದ್ದು (ವಿಮರ್ಶೆ)/ಡಿ.ಎಸ್. ನಾಗಭೂಷಣ/ 250/-
- ಕುವೆಂಪು ಸಾಹಿತ್ಯ ದರ್ಶನ/ ಡಿ.ಎಸ್. ನಾಗಭೂಷಣ/ 95/-
- ಕುವೆಂಪು ಪುನರಾನ್ವೇಷಣೆ/ ಡಿ.ಎಸ್. ನಾಗಭೂಷಣ 240/-
- ಲೋಹಿಯಾ ಕೈಪಿಡಿ/ 25 ರೂ
- ಲೋಹಿಯಾ ವಾಣಿ/ 25 ರೂ.
- ಜೆ.ಪಿ. ಕೈಪಿಡಿ/ 25 ರೂ.



ಜಯಪ್ರಕಾಶ ನಾರಾಯಣರು ಕಾಲಾನುಕಾಲಕ್ಕೆ ಎತ್ತಿ ಹಿಡಿದಿದ್ದ ಮಾರ್ಕ್ಸ್‌ವಾದ, ಸಮಾಜವಾದ, ಗಾಂಧಿವಾದ ಮತ್ತು ಸರ್ವೋದಯಗಳು ಸೋತು ಅಪ್ರಸ್ತುತವಾದ ಸಿದ್ಧಾಂತಗಳೆಂದು ಹೇಳಲಾಗುತ್ತಿರುವ ದಿನಗಳಿವು. ಆದರೂ ಜೆಪಿಯವರನ್ನು ನಾವು ಇಂದು ನೆನಪಿಸಿಕೊಳ್ಳುತ್ತಿದ್ದರೆ ಅದಕ್ಕೆ ಕಾರಣ, ಈ ಎಲ್ಲ ಸಿದ್ಧಾಂತಗಳನ್ನು ಅಪ್ರಸ್ತುತವೆಂದು ಬಿಂಬಿಸಿರುವ ನಿರ್ಣಾಯಕ ಬದಲಾವಣೆಗಳು 'ಅಭೂತಪೂರ್ವ ಪ್ರಗತಿ'ಯ ಹೆಸರಿನಲ್ಲಿ ಉಂಟು ಮಾಡಿರುವ ಪರಿಣಾಮಗಳು ಆಳದಲ್ಲೆಲ್ಲೋ ನಮ್ಮ ವ್ಯಾಕುಲತೆಯನ್ನು ಹೆಚ್ಚಿಸುತ್ತಿರುವುದೇ ಆಗಿದೆ.

ಬಡತನ ಮತ್ತು ಶ್ರೀಮಂತಿಕೆಗಳೆರಡರ ವ್ಯಾಖ್ಯೆಗಳೂ ಬದಲಾಗುತ್ತಾ, ಸಮಾಜದಲ್ಲಿ ಉಂಟಾಗಿರುವ ತಣಿಯದ ದಾಹ ಹಾಗೂ ಕೋಮುವಾದಿ ಮತ್ತು ಭಯೋತ್ಪಾದನೆಯ ರಾಜಕಾರಣ ಸೃಷ್ಟಿಸುತ್ತಿರುವ ಹೊಸ ಹೊಸ ರೀತಿಯ ವೈವಿಧ್ಯಮಯ ಹಿಂಸೆಗಳು ಭಾರತ ಒಂದು ರಾಷ್ಟ್ರವಾಗಿ, ಒಂದು ಸಂಸ್ಕೃತಿಯಾಗಿ ಉಳಿಯಬಲ್ಲುದೇ ಎಂಬ; ಸ್ವಾತಂತ್ರ್ಯೋತ್ತರ ಭಾರತದಲ್ಲಿ ಎಂದೂ ಎದ್ದಿರದಿದ್ದ ಪ್ರಶ್ನೆಯನ್ನು ಹುಟ್ಟು ಹಾಕಿದೆ.

ಗೀತಾಂಜಲಿ ಪುಸ್ತಕ ಪ್ರಕಾಶನ
ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರ ನಗರ,
ಶಿವಮೊಗ್ಗ-೫೭೭ ೨೦೧
+91 944988 6390

ISBN 978-93-81876-03-9
9 789381 876039
₹ ೨೫